49 ಪ್ರಶ್ನೆಗಳ ಪೈಕಿ 47 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ-ಅ)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಚುನಾವಣಾ ಪ್ರಸ್ತಾವನ್ನು ಮಂಡಿಸುವುದು. ಮಾನ್ಯ ಕಾನೂನು ಸಚಿವರು ಮಂಡಿಸಬೇಕು.

2. ಚುನಾವಣಾ ಪ್ರಸ್ತಾವ:

ಶ್ರೀ ಸಿ ಎಂ ಉದಾಸಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 ಅನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ) ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು. ಈ ನಿಯಮ 69 ರ ಮೇರೆಗೆ ಚರ್ಚೆ. ವಿರೋಧ ಪಕ್ಷದ ನಾಯಕರು ಮಾತನಾಡಬೇಕು. ಈಗಾಗಲೇ 1 ಗಂಟೆ 39 ನಿಮಿಷಗಳವರೆಗೆ ಚರ್ಚೆಯಾಗಿದೆ.

3. ನಿಯಮ 69ರ ಮೇಲೆ ಮುಂದುವರಿದ ಚರ್ಚೆ:

ವಿಷಯ: **ಲೋಕಾಯುಕ್ತರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವ ಬಗ್ಗೆ.**

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರು ಇದರಲ್ಲಿ ನೀವು ಟೈಂ ರಿಸ್ಟ್ರಿಕ್ಟ್ ಮಾಡಬೇಡಿ.

ಅಧ್ಯಕ್ಷರು: ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ: ಅವರು ಯಾವಾತ್ತಾದರೂ ಉತ್ತರ ಕೊಡಲಿ. ಸೋಮವಾರವಾದರೂ ಕೊಡಲಿ ಅಥವಾ ಮಂಗಳವಾರವಾದರೂ ಕೊಡಲಿ. ಸೋಮವಾರ ಬಹಳ ಸದಸ್ಯರು ಇನ್ನೂ ಮಾತನಾಡುವವರು ಇದ್ದಾರೆ. ಆ ಕಡೆಯವರು ಮಾತನಾಡಬೇಕು ಮತ್ತು ಈ ಕಡೆಯವರು ಕೂಡ ಮಾತನಾಡಬೆಕು. ಆದುದರಿಂದ ಮಂಗಳವಾರ ಮುಖ್ಯಮಂತ್ರಿಗಳು ಉತ್ತರ ಕೊಡುವಂತೆ ನೀವು ಅವರಿಗೆ ಹೇಳಿ. ಮಾನ್ಯ ಮುಖ್ಯಮತ್ರಿಗಳೇ ನಿನ್ನೆಯ ದಿವಸ ಮಾತನಾಡುವಾಗ

ಮೂರು ದಿವಸ ಬೇಕಾದರೂ ಇದರ ಮೇಲೆ ಚರ್ಚೆ ಮಾಡಿ ಎಂದು ಹೇಳಿದ್ದಾರೆ. Why he is going back now?

ಅಧ್ಯಕ್ಷರು: ಅಯಿತು. ತಾವು ಈಗ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಗಂಟಲಿಗೆ infection ಆಗಿ ಸ್ವಲ್ಪ ತೊಂದರೆಯಾಗಿದೆ. ಆದರೂ ನಾನು ಇವತ್ತೇ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ನಾನು ನಿಯಮ 69ರಡಿಯಲ್ಲಿ ಚರ್ಚೆ ಪ್ರಾರಂಭಿಸಿ ಅಪೂರ್ಣ ಮಾಡಿದ್ದೆ. ಇವತ್ತು ಅದನ್ನು ಮುಗಿಸುವುದಕ್ಕೆ ತಮ್ಮ ಸಹಕಾರದಿಂದ ಪ್ರಯತ್ನ ಮಾಡುತ್ತೇನೆ. ಆದರೆ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಈಗ ಸದನದಲ್ಲಿ ಇಲ್ಲ. ಅವರು ಸದನಕ್ಕೆ ಈಗ ಬರುವುದಿಲ್ಲವೇ?

ಶ್ರೀ ನೆ ಲ ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಯಾರು ವಿರೋಧ ಪಕ್ಷದ ನಾಯಕರ ಮಾತುಗಳನ್ನು ಕೇಳಬೇಕೋ ಅವರೇ ಸದನದಲ್ಲಿ ಇಲ್ಲ.

ಶ್ರೀ ಎಸ್ ಎ ರವೀಂದ್ರನಾಥ್(ಕೃಷಿ ಸಚಿವರು): ನಾವಿದ್ದೇವೆ.

ಶ್ರೀ ಸಿದ್ದರಾಮಯ್ಯ: ನೀವಿದ್ದು ಏನು ಮಾಡುತ್ತೀರಿ? ನೀವು ಕೊಡಬೇಕಾದ ಗೊಬ್ಬರವನ್ನೇ ಸರಿಯಾಗಿ ಕೊಟ್ಟಿಲ್ಲ. ನಾವಿದ್ದೇವೆ ಎಂದು ಸುಮ್ಮನೇ ಕೈ ಎತ್ತುತ್ತೀರಿ. ಸಬ್ಸಿಡಿ ಕಡಿಮೆ ಮಾಡಿದ್ದರೂ ಸುಮ್ಮನೆ ನೀವು ಕುಳಿತುಕೊಂಡಿದ್ದೀರಿ. 25% ಸಬ್ಸಿಡಿ ಕಡಿಮೇ ಮಾಡಿದ್ದಾರೆ. ಲಿಫ್ಟ್ ಇರಿಗೇಶನ್‌ನಲ್ಲಿ 25% ಸಬ್ಸಿಡಿ ಕಡಿಮೆ ಮಾಡಿದ್ದಾರೆ. ಮೊದಲು ಇದರಲ್ಲಿ ಕಡಿಮೆ ಮಾಡಿರುವ ಹಣವನ್ನು ತೆಗೆದುಕೊಳ್ಳು ಕ್ರಮ ತೆಗೆದುಕೊಳ್ಳಿ. ಆಮೇಲೆ ಬೇಕಾದರೆ ನೀವೇ ಉತ್ತರ ಕೊಡವಿರಂತೆ.

ಶ್ರೀ ಎಸ್ ಎ ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ 450 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದ್ದರೆ ಈ ವರ್ಷ ಕೇವಲ 150 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ : ಅಂದರೆ you are all entirely depending upon the Central Government. ಮೊದಲು ನೀವು ಕೊಡಬೇಕಾದ್ದನ್ನು ಕೊಡಿ.

ಶ್ರೀ ಎಸ್ ಎ ರವಿಂದ್ರನಾಥ್: ಕೇಂದ್ರದವರು 50% ರಾಜ್ಯಕ್ಕೆ ಕೊಡಲೇಬೇಕು. ಅದೇ ರೀತಿ 50% ನಾವು ಕೊಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮೊದಲು ನೀವು ಕೊಡಬೇಕಾದ್ದನ್ನು ಕೊಡಿ. ಏಕೆಂದರೆ ರೈತರಿಗೆ ಅನ್ಯಾಯವಾದರೆ ರಕ್ತದಲ್ಲಿ ಬರದುಕೊಡುವವರು ನೀವು ತಾನೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಒಂದು ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆ ಎಂದು ಒಂದು ಪತ್ರವನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಕಾನೂನು ಸಚಿವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡಿ ಎಂದು ಅವರೇ ಹೇಳುತ್ತಾರೆ. ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಮುಖ್ಯಮಂತ್ರಿಗಳು ಇರುವುದಿಲ್ಲ. ಇದಕ್ಕೆಲ್ಲಾ ಮುಖ್ಯಮಂತ್ರಿಗಳೆ, ಜವಾಬ್ದಾರರು. ಅವರದ್ದೇ ಇಲಾಖೆ, ಫಾರೆಸ್ಟ ಡಿಪಾರ್ಟ್‌ಮೆಂಟ್ ಅವರದ್ದೇ ಇಲಾಖೆಯಾಗಿದೆ. ಮೈನ್ಸ್ ಅಂಡ್ ಜಿಯಾಲಜಿ ಅವರದ್ದೇ ಇಲಾಖೆಯಾಗಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್ ಅವರದ್ದೇ ಖಾತೆಯಾಗಿದೆ. ಕಳ್ಳತನವಾಗಿರುವುದು ಅವರದ್ದೇ ಇಲಾಖೆಯಲ್ಲಿ.

ಶ್ರೀ ಡಿ ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೂ ಕೆಳಗಡೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಇದ್ದಾರೆ. ಆ ಕಾರ್ಯಕ್ರಮಕ್ಕೆ ಮಾನ್ಯ ವೀರಪ್ಪಮೊಯ್ಲಿಯವರು ಬಂದಿದ್ದಾರೆ.

ಶ್ರೀ ಸಿದ್ದರಾಮಯ್ಯ: ಇಲ್ಲಿ ನಾನು ಮಾತನಾಡುವುದು ಅಲ್ಲಿ ಅವರಿಗೆ ಕೇಳಿಸುತ್ತದೆಯೇ? ಏನು ಮಾತನಾಡುತ್ತೀರಿ ನೀವು.

ಶ್ರೀ ಎಸ್ ಸುರೇಶ್‌ಕುಮಾರ್(ಕಾನೂನು ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಏನೇನು ಮಾತನಾಡುತ್ತೀರೋ ಅದೆಲ್ಲವನ್ನು ಆಲಿಸಿ ಅದಕ್ಕೆ ನಾನು ನಿಮಗೆ ಉತ್ತರವನ್ನು ಕೊಡಿಸುತ್ತೇನೆ. ಅದು ನನ್ನ ಜವಾಬ್ದಾರಿ.

ಶ್ರೀ ಸಿದ್ದರಾಮಯ್ಯ: ಇಲ್ಲಿ ನೀವೊಬ್ಬರು ಕುಳಿತಿದ್ದೀರಿ.

ಶ್ರೀ ಎಸ್ ಸುರೇಶ್‌ಕುಮಾರ್: ಇಲ್ಲಿ ನಾನು ಕುಳಿತುಕೊಳ್ಳಬೇಡವೆ ಸ್ವಾಮಿ?

ಶ್ರೀ ಸಿದ್ದರಾಮಯ್ಯ: ಪ್ರತಿ ದಿನ ಇಲ್ಲಿ ನೀವು ಕುಳಿತುಕೊಳ್ಳಿ, I want you to sit before me. You are only inspiration for me.

ಅಧ್ಯಕ್ಷರು: ಆಯಿತು. ತಾವು ಮಾತನಾಡಿ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅತ್ಯಂತ ಮಹತ್ವವಾಗಿರತಕ್ಕಂಥ ವಿಚಾರದ ಬಗ್ಗೆ ಚರ್ಚೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಅಧಿಕಾರಿಗಳ ಗ್ಯಾಲರಿಯಲ್ಲಿಯೂ ಕೂಡ ಇದಕ್ಕೆ ಸಂಬಂಧಪಟ್ಟಂಥ ಒಬ್ಬ ಅಧಿಕಾರಿಯೂ ಇಲ್ಲ. ಹೀಗಾದರೆ ಯಾವ ರೀತಿ ಚರ್ಚೆ ಮಾಡುವುದು? ಏನು ಪ್ರಯೋಜನವಾಗುತ್ತದೆ ಮಾತನಾಡಿ. ಈಗ ನೀವು ಒಂದು ಕೆಲಸ ಮಾಡಿ. ಇವತ್ತು ಶುಕ್ರವಾರ ಬಹಳ ಸದಸ್ಯರು ತಮ್ಮ ತಮ್ಮ ಊರಿಗೆ ಹೋಗುವವರು ಇರುತ್ತಾರೆ. ನಾನು ಈಗ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ, ಈಗ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಆ ಚರ್ಚೆ ಎಲ್ಲರಿಗೂ ಗೊತ್ತಿರುವಂತೆ ಕೇಂದ್ರ ಸರ್ಕಾರದ ಗಣಿ ಸಚಿವರು ಈಗಾಗಲೇ ರಾಜ್ಯ ಸರ್ಕಾರಕ್ಕೆ ಮೂರು ಕಾಗದಗಳನ್ನು ಬರೆದಿದ್ದಾರೆ.. ಈಗ ಇತ್ತೀಚೆಗೆ ಒಂದು ಕಾಗದವನ್ನು ಏನು ಬರೆದಿದ್ದಾರೆ ಅದು ಕೂಡ ಮಾಧ್ಯಮದಲ್ಲಿ ಬಂದಿದೆ. ಇದರ ಜೊತೆಗೆ ಈಗಾಗಲೇ ಎರಡು ಕಾಗದಗಳಿಗೆ ರಾಜ್ಯ ಸರ್ಕಾರ ಉತ್ತರವನ್ನು ಕೊಟ್ಟಿರಬಹುದು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೇಲೆ ಒಂದು ರೀತಿಯ ರಿಮಾರ್ಕ್ಸ್‌ನ್ನು ಮಾಡತಕ್ಕಂಥ ರೀತಿಯಲ್ಲಿ ಒಕ್ಕಣೆ ಬಂದಿರಬೇಕಾದಾಗ, ಒರಿಜಿನಲ್ ಲೇಟರ್‌ನಲ್ಲಿ ಏನು ಇದೆಯೋ ನನಗೆ ಗೊತ್ತಿಲ್ಲ. ಏಕೆಂದರೆ ನಾನು ಒರಿಜಿನಲ್ ಲೆಟರ್ ಅನ್ನು ನಾನು ನೋಡಿಲ್ಲ. ಇದರ ಜೊತೆಗೆ ನಿನ್ನೆ ಕೌನ್ಸಿಲ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಬಹಳ ವೀರಾವೇಶದಿಂದ ಮಾತನಾಡಿದ್ದಾರೆ. ನಡಿಯಿರಿ, ಸದನವನ್ನು ಮೂರು ದಿವಸ ಮುಂದೂಡಿ ಎಲ್ಲರೂ ದೆಹಲಿಗೆ ಹೋಗಿ ಎಕ್ಸ್‌ಪೋರ್ಟ್‌ನ್ನು ನಿಲ್ಲಿಸಿಬಿಡೋಣವೆಂದಿದ್ದಾರೆ. ನನಗೆ ಅವರ ಬುದ್ಧಿವಂತಿಕೆಯ ಉತ್ತರದಿಂದ ಸಮಾಧಾನವಾಗುವುದಿಲ್ಲ. ಬುದ್ಧಿವಂತಿಯ ಉತ್ತರವೆಂದರೆ, ಆಗಿರತಕ್ಕಂಥ ಅವ್ಯವಹಾರದ ಬಗ್ಗೆ ಎನ್‌ಕ್ವೈರಿ ಮಾಡಿ ಎಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹೇಳಿದರೆ ಆದಕ್ಕೆ ಇವರು ಎಕ್ಸ್‌ಪೋರ್ಟ್‌ನ್ನೇ ನಿಲ್ಲಿಸಿಬಿಡಿ ಎಂದರೆ ಹೇಗೆ? ಏನು ಇವರೆಲ್ಲರೂ ಇಡೀ ದೇಶದ ಕಾಂಟ್ರ್ಯಾಕ್ಟ್‌ನ್ನು ತೆಗೆದುಕೊಂಡಿದ್ದಾರೆಯೇ? ಇವತ್ತೇನು ಛತ್ತೀಸ್‌ಗಡದಿಂದ ಎಕ್ಸ್‌ಪೋರ್ಟ್ ಆಗುತ್ತಿದೆ ಅದನ್ನು ಇವರ ಕೈಯಿಂದ ನಿಲ್ಲಿಸುವುದಕ್ಕಾಗುತ್ತದೆಯೇ? ಇವರ ಕೇವಲ ಈ ರಾಜ್ಯದ ಮುಖ್ಯಮಂತ್ರಿಗಳು. ಇವತ್ತು ನೀವು ನಿಮ್ಮ ರಾಜ್ಯದಲ್ಲಿ ಎಕ್ಸ್‌ಪೋರ್ಟ್‌ನ್ನು ನಿಲ್ಲಿಸುವುದಕ್ಕೆ ಪಾಲಿಸಿ

ಮಾಡಿಕೊಂಡಿದ್ದೀರಿ. ನಿಮ್ಮ ಹತ್ತಿರ ನೀತಿ ಇದೆ. ನಿಮ್ಮ ಹತ್ತಿರ ನೀತಿ ಇದ್ದಾಗ ಏಕೆ ನೀವು ಕೇಂದ್ರ ಸರ್ಕಾರಕ್ಕೆ ಹೋಗಬೇಕು. ಏಕೆ ನೀವು ಕೇಂದ್ರ ಸರ್ಕಾರಕ್ಕೆ ಬೆಟ್ಟು ತೋರಿಸಬೇಕು? ಸದನ ಮುಂದೂಡಿ ದೆಹಲಿಗೆ ಪ್ರಧಾನ ಮಂತ್ರಿಗಳ ಹತ್ತಿರ ಹೋಗೋಣವೆನ್ನುತ್ತಾರೆ. ಪ್ರಧಾನ ಮಂತ್ರಿಗಳು ಇದಕ್ಕೆ ಏನು ಮಾಡುತ್ತಾರೆ? ಅಧಿಕಾರ ನಿಮ್ಮ ಕೈಯಲ್ಲಿ ಇದೆ.

ಅಧ್ಯಕ್ಷರು: ತಾವೇ ಮೊದಲು ಮಾತನಾಡುವವುದಾದರೆ, ತಾವೇ ಪ್ರಸ್ತಾಪ ಮಾಡಿ.

ಶ್ರೀ ಟಿ ಬಿ ಜಯಚಂದ್ರ: ವಿರೋಧ ಪಕ್ಷದ ನಾಯಕರು ಮತ್ತು ಉಪನಾಯಕರು ಮಾತನಾಡುವಾಗ ಒಂದೇ ವಿಷಯದ ಮೇಲೆ ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್ ಸುರೇಶ್‌ಕುಮಾರ್ (ಕಾನೂನು ಸಚಿವರು): ಮಾನ್ಯ ಜಯಚಂದ್ರರವರೆ, ನೀವು ನಿಮ್ಮ ಡಿಬೆಟ್ಸ್‌ನ್ನು ಸ್ಟಾರ್ಟ್ ಮಾಡಿ ಎಂದು ಮಾನ್ಯ ಅಧ್ಯಕ್ಷರು ಹೇಳಿದ್ದು.

ಅಧ್ಯಕ್ಷರು: ನಾನು ಅದನ್ನೆ ಮಾನ್ಯ ಜಯಚಂದ್ರರವರಿಗೆ ಹೇಳಿದ್ದು.

ಶ್ರೀ ಟಿ ಬಿ ಜಯಚಂದ್ರ: ಯಾರು ಮಾತನಾಡಬೇಕು ಎನ್ನುವುದನ್ನು ನಾವು ಡಿಸೈಡ್ ಮಾಡುತ್ತೇವೆ.

ಅಧ್ಯಕ್ಷರು: ಹಾಗಾದರೆ ನೀವೇ ಮುಂದುವರೆಸಿ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ವಿರೋಧಪಕ್ಷದ ನಾಯಕರಿಗೆ ಗಂಟಲು ನೋವಿದ್ದರೂ ಅವರು ಮಾತನಾಡಿದಾಗ ನಿಮಗೆ ಕೇಳಿಸುತ್ತದೆ ಅಲ್ಲವೇ? ನಿಮಗೇನು ನೋವು ಇಲ್ಲವಲ್ಲ?

ಶ್ರೀ ಎಸ್ ಸುರೇಶ್‌ಕುಮಾರ್: ಮಾನ್ಯ ಸಿದ್ದರಾಮಯ್ಯನವರು ಮಾತನಾಡುವುದು ಕೇಳಿಸುತ್ತದೆ. ಆದರೆ ನೋಡುವುದಕ್ಕಾಗುವುದಿಲ್ಲ.

ಶ್ರೀ ಟಿ ಬಿ ಜಯಚಂದ್ರ: ಆ ತೊಂದರೆ ಏನೂ ಇಲ್ಲ. ನಿಮಗೆ ಆ ರೀತಿ ಕಾಣಿಸುತ್ತದೆ ಅಷ್ಟೆ. ಒಟ್ಟಿನಲ್ಲಿ ನೀವೇನೋ ಮಾಡಿ ಅವರನ್ನು ಕೂಡಿಸಬೇಕು ಎಂದುಕೊಂಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ಸುರೇಶ್‌ಕುಮಾರ್‌ರವರೆ, ನಿಮಗೆ ನೋಡುವುದಕ್ಕೆ ಆಗುವುದಿಲ್ಲವೆಂದರೆ ನೀವು ಕಪ್ಪು ಕನ್ನಡಕ ಹಾಕಿಕೊಂಡುಬಿಡಿ.

ಶ್ರೀ ಎಸ್ ಸುರೇಶ್‌ಕುಮಾರ್: ನಾನು ನೋಡುವುದಕ್ಕಾಗುವುದಿಲ್ಲವೆಂದು ಹೇಳಿದ್ದು ಬೇರೆ ಅರ್ಥದಲ್ಲಿ. ಈಗ ನೀವು ಗಂಟಲು ತೊಂದರೆ ಇಟ್ಟುಕೊಂಡೂ ಮಾತನಾಡುತ್ತಿದ್ದೀರಲ್ಲ, ಆ ಒಂದು ಪರಿಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲವೆಂದು ನಾನು ಹೇಳಿದ್ದು. ನೀವು debateನಲ್ಲಿದ್ದೀರಿ ಗೊತ್ತು, debateನಲ್ಲಿರುವಾಗ ನೀವು ಸ್ವಲ್ಪ ಸಹಜವಾದ ಸಂಗತಿಯನ್ನು ಸ್ವೀಕರಿಸಿ.

ಶ್ರೀ ಟಿ ಬಿ ಜಯಚಂದ್ರ (ಮುಂದು): ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರಕ್ಕೆ ಒಂದು ಒತ್ತಾಯವನ್ನು ಮಾಡುತ್ತೇನೆ. ಕೇಂದ್ರ ಸರ್ಕಾರದ ಬರೆದಂತಹ ಆ ಮೂರು ಕಾಗದಗಳು ಹಾಗೂ ನೀವು ಬರೆದಂತಹ ಉತ್ತರಗಳು ಏನಿವೆ ಅದನ್ನು ದಯಮಾಡಿ ಸಭೆಯ ಮುಂದೆ ಇಡಿ. ಅವುಗಳನ್ನು ಸಭೆಯ ಮುಂದೆ ಇಟ್ಟರೆ ಚರ್ಚೆಗೆ ಆಧಾರ ವಿಷಯವಾಗಿ ಇಟ್ಟುಕೊಂಡು ಮಾತನಾಡೋಣ. ಕೇಂದ್ರ ಸರ್ಕಾರದ ಸಚಿವರು ನಿನ್ನೆ ಬರೆದಂತಹ ಕಾಗದದಲ್ಲಿ ಏನು ಬರೆದಿದ್ದಾರೆಂದು ಇದೆಲ್ಲದಕ್ಕೂ ಕೂಡ ಅಂತಿಮ ಹಾಡಬೇಕೆಂದರೆ CBI enquiry ನೇ ಅಚಿತಿಮ ಎನ್ನುವ ಮಾತನ್ನು ಹೇಳಿದಾಗ, ಅದಕ್ಕೆ ನೆರೆ ರಾಜ್ಯವಾದಂತಹ ಆಂಧ್ರ ಪ್ರದೇಶದವರು CBI enquiry ಮಾಡುವುದಕ್ಕೆ ಶಿಫಾರಸ್ಸು ಮಾಡಿರುವಾಗ, ನೀವು ಏಕೆ ತಡೆ ಹಿಡಿದುಕೊಂಡಿದ್ದೀರಿ? ನಿಮಗೆ ನಿಜವಾಗಿ ಕೂಡ ಕಳಕಳಿ ಇದ್ದರೆ ದಯಮಾಡಿ ನೀವು CBI enquiry ಒಪಿಸುವಂತಹ ಕೆಲಸವನ್ನು ಮಾಡಿ. ಇದನ್ನು CBI enquiryಗೆ ಒಪ್ಪಿಸುವುದಾದರೆ ಇದರ ಬಗ್ಗೆ ಚರ್ಚೆ ಮಾಡುವಂತಹ ಅವಶ್ಯಕತೆ ಇರುವುದಿಲ್ಲ. ದಯಮಾಡಿ ಮುಖ್ಯಮಂತ್ರಿಗಳು ಹಾಗೂ ಸರ್ಕಾರ ಈ ರೀತಿಯಾಗಿ ದಾರಿ ತಪ್ಪಿಸುವಂತಹ ಮಾತನ್ನು ಆಡಬೇಡಿ. ನಡೀರಿ ದೆಹಲಿಗೆ ಹೋಗೋಣ ಎಂದರೆ, ಏಕೆ? Export ನಿಲ್ಲಿಸುವುದಕ್ಕೆ ನೀವ್ಯಾರು? ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವೇ? ನಿಮ್ಮ ಕೈಯಲ್ಲಿ ಕಾನೂನು ಇದೆ, ನೀವು ನೀತಿ ಮಾಡಿಕೊಂಡಿದ್ದೀರಿ, ಇಲ್ಲಿ value added product ಅಗಿ ಮಾಡುವುದಕ್ಕೆ ಅವಕಾಶವನ್ನು ಮಾಡದಿರತಕ್ಕಂಥವರು ನೀವು ಕೇಂದ್ರ ಸರ್ಕಾರದ ತಡೆ ತೋರಿಸುವುದು ಬೇಡ. ದಯಮಾಡಿ ನಾನು ಹೇಳುತ್ತೇನೆ,

I demand and place all the records before this House and let it be the basis for the discussion. ಆಗ ಏನಾದರೂ ಒಂದು conclusion ಆಗುತ್ತದೆ. ಮುಖ್ಯಮಂತ್ರಿಗಳು ಕಳಕಳಿಯನ್ನು ಮಾಡುತ್ತಿಲ್ಲ. ಹೌದು ಇವತ್ತು ಸಂಪತ್ತು ಲೂಟಿಯಾಗುತ್ತಿದೆ, ವಿದೇಶಕ್ಕೆ ಅದಿರು ಹೋಗುತ್ತಿದೆ, ಅದನ್ನು ತಡೆಗಟ್ಟಬೇಕು ಎನ್ನುವಂತಹ ಕಳಕಳಿ, ಪ್ರಾಮಾಣಿಕತೆ ನಿಮ್ಮಲ್ಲಿ ಇದ್ದರೆ ದಯಮಾಡಿ ಆ ಮೂರು ಕಾಗದಗಳನ್ನು ಸಭೆಯ ಮುಂದೆ ಇಡಿ. ಮಾನ್ಯ ಸುರೇಶ್‌ಕುಮಾರ್‌ರವರೆ ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, we want to know the tone and tenor of the letter ಮತ್ತು ಆ ಲೆಟರ್‌ಗಳನ್ನು ನೋಡಿದಾಗ ಯಾರು ತಪ್ಪು ಮಾಡಿದ್ದಾರೆ, ತಪ್ಪು ಎಲ್ಲಿ ಆಗಿದೆ, ಯಾವ ಕಂಪನಿಯವರು ತಪ್ಪು ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಹಾಗಾಗಿ ದಯಮಾಡಿ ಸಭೆಯ ಮುಂದೆ ಆ ಕಾಗದಗಳನ್ನು ಇಡಿ. ಇದು ಚರ್ಚೆಯ ವಸ್ತುವಾಗಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈಗ conclude ಮಾಡುವ ಸಂದರ್ಭದಲ್ಲಿ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಏಕೆಂದರೆ ಅವರಿಗೆ ಸಂಬಂಧಪಟ್ಟ ಅನೇಕ ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ಈಗ ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದಂತೆ ಇವತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ರಾಜ್ಯದಲ್ಲಿರುವಂತಹ ಐದು ಲಕ್ಷ ಟನ್ ಅದಿರು ಕಳ್ಳತನದಲ್ಲಿ ವಿದೇಶಕ್ಕೆ ಹೊರಟುಹೋಗಿದೆ, ಅದರ ಬಗ್ಗೆ ಮಾಹಿತಿ ಸಿಕ್ಕಮೇಲೆ ಕೇಂದ್ರದ ಮಂತ್ರಿಗಳು ಮೂರನೇ ಪತ್ರವನ್ನು ಬರೆದಿದ್ದಾರೆ. ಅವರು, ಅರಣ್ಯ ಪ್ರದೇಶಗಳಲ್ಲಿ ಸಾವಿರಾರು ಕೋಟಿ ರೂಪಾಯಿಯ ಖನಿಜ ಸಂಪತ್ತು ಲೂಟಿಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಕೇಂದ್ರ ಸರ್ಕಾರ ಸಹಾಯ ಹಸ್ತ ಕೊಡುವುದಕ್ಕೆ ತಯಾರಾಗಿದೆ. ನಿಮ್ಮ ಸಿಬಿಐ ಎನ್‌ಕ್ವೈರಿಗೆ ಬರೆದರೆ ನಾವು ಮಾಡಿ ಕೊಡುತ್ತೇವೆ, ಇದನ್ನು ತಪ್ಪಿಸಬೇಕು., ಗಣಿ ಮಾಫಿಯಾ ಏನು ಲೂಟಿ ಹೊಡೆಯುತ್ತಿದೆ ಅದನ್ನು ನಿಲ್ಲಿಸಬೇಕೆಂದು ಬರೆದಿದ್ದಾರೆ. ನೀವು ಆ ಪತ್ರವನ್ನು ಇಲ್ಲಿ ಇಡಬೇಕೇ ಬೇಡವೇ? ಸರ್ಕಾರದಿಂದ ಆ ಪತ್ರವನ್ನು ಇಡಿ. ಅವರು ಏನು ಬರೆದಿದ್ದಾರೆಂದು, ನಮಗೆ ಚರ್ಚೆಗೆ ಅನುಕೂಲವಾಗುತ್ತದೆ ಎಂದು ಅದನ್ನು ಸ್ವಲ್ಪ ನೋಡುತ್ತೇವೆ. ಅವರು

ಬರೆಯದಿದ್ದರೆ ಇಲ್ಲವೆಂದು ಹೇಳಲಿ. ಪತ್ರ ಬಂದಿಲ್ಲವೆಂದು ಹೇಳಲಿ. ಹಿಂದೆ ಏನು ಪತ್ರ ಬರೆದಿದ್ದಾರೆ?

ಡಾ: ಹೆಚ್ ಸಿ ಮಹದೇವಪ್ಪ: ಹಿಂದೆ ಕುಳಿತುಕೊಂಡು ಬಸವರಾಜ ಬೊಮ್ಮಾಯಿಯವರು ಮತ್ತು ಸಹಕಾರ ಮಂತ್ರಿಯವರು ಮಿನಿ ಡಿಸ್‌ಕಷನ್‌ನಲ್ಲಿ ಇದ್ದಾರೆ ನೋಡಿ.

ಶ್ರೀ ಸಿ ಸಿ ಪಾಟೀಲ್: ಮಹದೇವಪ್ಪನವರೇ ನಮಗೆ ನಿಮ್ಮ ಬಗ್ಗೆ ಬಹಳ ಒಳ್ಳೆಯ ಭಾವನೆ ಇದೆ, ನೀವು ನಮ್ಮ ಬಗ್ಗೆ ಏಕೆ ಈ ರೀತಿ ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ವಿಷಯಾಂತರ ಬೇಡ.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್: ಇದು ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಂದ ರೂಢಿಯಾಗಿದ್ದು.

ಡಾ: ಹೆಚ್ ಸಿ ಮಹದೇವಪ್ಪ: ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ನಿನ್ನೆ ತಾನೇ ಹುಟ್ಟಿದ ಹಬ್ಬ ಆಚರಿಸಿಕೊಂಡಿದ್ದಾರೆ. ಹುಟ್ಟಿದ ಹಬ್ಬದ ಆಚರಣೆಯಲ್ಲಿ ಸರಿಯಾಗಿ ಮಾರ್ಗದರ್ಶನ ಮಾಡಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ತಾವು ಸರ್ಕಾರಕ್ಕೆ ಚಾಟಿ ಏಟು ಬೀಸದೇ ಹೋದರೆ ಸದನಕ್ಕೆ ಮಂತ್ರಿಗಳು ಬರುವುದಿಲ್ಲ, ಅಧಿಕಾರಿಗಳು ಬರುವುದಿಲ್ಲ.

ಅಧ್ಯಕ್ಷರು: ಅರಣ್ಯ ಮತ್ತು ಗಣಿ ಇಲಾಖೆಯವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ: ಅರಣ್ಯ ಇಲಾಖೆಯವರು ಕುಳಿತುಕೊಂಡು ಏನು ಮಾಡುತ್ತಾರೆ? PCCF ಇಲ್ಲಿರಬೇಕೇ, ಬೇಡವೇ? ಇವರ ಇಲಾಖೆಯಲ್ಲೇ ಎಲ್ಲಾ ತಿಂದುಹಾಕಿ ಬಿಟ್ಟಿರುವುದು. Finace Departmentನವರು, Mines and Geology Department, PWD Departmentನವರು ಇರಬೇಕೇ ಬೇಡವೇ ಈ scandal ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಿದೆ. Government is also showing callous attitude. Ministers and Officers are also following it.

ಅಧ್ಯಕ್ಷರು: ಎಲ್ಲಾ ಇಲಾಖೆಯವರು ಇಲ್ಲಿ ಇರುವುದಕ್ಕೆ ಹೇಳಿ.

ಶ್ರೀ ಸಿದ್ದರಾಮಯ್ಯ: ಈ ರೀತಿಯಾದರೆ ಚರ್ಚೆ ಏಕೆ ಮಾಡಬೇಕು? ಹೌಸ್ ಏಕೆ ಕರೆಯುತ್ತೀರಿ ಹೇಳಿ ನೋಡೋಣ. ಹೌಸ್ ಕರೆಯುವುದು ಬೇಡ, ಚರ್ಚೆ ಮಾಡುವುದು ಬೇಡ. ವಿರೋಧ ಪಕ್ಷದವರು co-operate ಮಾಡುವುದಿಲ್ಲ, ಪಲಾಯನ ಮಾಡುತ್ತಾರೆ, ಹೊರಗಡೆ ಮಾತನಾಡುತ್ತಾರೆ, ನಮ್ಮ ಕೈಕಾಲು ಎಳೆಯುತ್ತಾರೆ, ನನಗೆ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ, ಅಭಿವೃದ್ಧಿ ವೇಗಕ್ಕೆ ತಡೆ ಮಾಡುತ್ತಾರೆಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಾರೆ. ನಾವು ಹೀಗೆ ಮಾಡಿದೆವಾ? ಈಗ ಯಾರು co-operation ಮಾಡುತ್ತಿರುವುದು? ಇವತ್ತು CAG reportನಲ್ಲಿ ಇವರ ಅಭಿವೃದ್ಧಿ ವೇಗ ಏನಿದೆ ಎಂದು ಇವರ ಮುಖಕ್ಕೆ ಹಿಡಿದು ತೋರಿಸಿದ್ದಾರೆ, ನಾಚಿಕೆಯಾಗಬೇಕು. CAG report ಓದಬೇಕು. ನಿನ್ನೆ ತಾನೇ ಇಲ್ಲಿ CAG report ಮಂಡಿಸಿದ್ದಿರಿ. ಅಭಿವೃದ್ಧಿ ವೇಗವಂತೆ, ನಾಚಿಕೆಯಾಗಬೇಕು. ಮಾನ್ಯ ಅಧ್ಯಕ್ಷರೇ ನಾನು ಇದನ್ನು ಬಹಳ ಬೇಸರದಿಂದ ಹೇಳುತ್ತಿದ್ದೇನೆ. ಹಣಕಾಸು ಇಲಾಖೆಯ ಪರಿಸ್ಥಿತಿ ಏನು ಇದೆ ಎಂದು ನಾನು ಹೇಳಿದ್ದೆನು, CAGಯವರು ಅದನ್ನು ಸಾಭೀತು ಮಾಡುವ ರೀತಿಯಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ. ನಾಚಿಕೆಯಾಗಬೇಕು. 2009–10ಕ್ಕೆ 13ರಿಂದ 14 ಸಾವಿರ ಕೋಟಿ ರೂಪಾಯಿ ದುಡ್ಡು ಇಲ್ಲದೇ ಪ್ಲಾನ್‌ನಲ್ಲಿ ಮತ್ತು ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡುವುದಕ್ಕೆ ಆಗಿಲ್ಲ. Can you call this as a Government? Is there any Governance? ನಾಚಿಕೆಯಾಗಬೇಕು. CAG report was submitted yesterday. It clearly proves all allegations made by me. ನಾನು ಹೇಳಿದರೆ ಸಿದ್ಧರಾಮಯ್ಯ ಸುಳ್ಳು ಹೇಳುತ್ತಾನೆ ಎನ್ನುವುದು. ಈ CAG report ಸುಳ್ಳೇ? ನಿಮ್ಮ ಹತ್ತಿರ ದುಡ್ಡಿಲ್ಲಾರೀ, ತೆರಿಗೆ ವಸೂಲು ಮಾಡಿಲ್ಲವೆಂದರೆ ನಮಗೆ RBI ನವರು ಶಿಫಾರಸ್ಸು ಕೊಟ್ಟಿದ್ದಾರೆ, ಬೆನ್ನು ತಟ್ಟಿದ್ದಾರೆ, ಪ್ಲಾನಿಂಗ್‌ನವರು ನಮ್ಮನ್ನು ಹಾಡಿ ಹೊಗಳಿದ್ದಾರೆ ಎಂದು ಹೇಳುತ್ತಾರೆ. Where is your statement? It is not incorporated in the CAG Report. Where is it? ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಈ ಎಲ್ಲಾ ಇಲಾಖೆಗೆ ಸಂಬಂಧಪಟ್ಟವರಾದ್ದರಿಂದ ಅವರು ಇಲ್ಲಿ ಇರಬೇಕು. ದಯವಿಟ್ಟು ನಾನು ನಿಮ್ಮಲ್ಲಿ

ಕಳಕಳಿಯಿಂದ ಮನವಿ ಮಾಡುತ್ತೇನೆ, ನಿಮ್ಮ ಕಾಲದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇಲ್ಲದೇ ಹೋದರೆ ನಾವು ಏಕೆ ಮಾತನಾಡಬೇಕು ಹೇಳಿ. ನಮ್ಮ ಗಂಟಲು ಏಕೆ ನೋಯಿಸಿಕೊಳ್ಳಬೇಕು? ಹಾಗಾದರೆ ನಾವು ಇಲ್ಲಿಗೆ ಬರುವುದು ಏಕೆ? ಕರ್ನಾಟಕದ ಜನ ನಾವು ಏನು ಮಾಡುತ್ತಿದ್ದೇವೆಂದು ನೋಡುತ್ತಿದ್ದಾರೆ. ಇವತ್ತು ಲೋಕಾಯುಕ್ತರು ರಾಜೀನಾಮೆ ಕೊಟ್ಟಿರುವುದನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು? ಅವರು ನಿಮಗೆ ತಿಳಿಸಿಬಿಟ್ಟು functionಗೆ ಹೋಗುತ್ತಾರೆ. Assembly ನಡೆಯುವಾಗ ಯಾರಾದರೂ function ಇಟ್ಟುಕೊಳ್ಳುತ್ತಾರೆ? Function important? ಇದನ್ನು ಇನ್ನೊಂದು ದಿನ ಮಾಡಬಹುದು. ಈ ರಾಜ್ಯದಲ್ಲಿ ಪ್ರಳಯವೇನೂ ಆಗುವುದಿಲ್ಲ. ನಾವು functionಗೆ ಹೋಗಬೇಡಿ ಎಂದು ಹೇಳುವುದಿಲ್ಲ. What is the seriousness of this discussion? ಇಡೀ ರಾಜ್ಯದ ಜನರು ಈಗ ಈ ಸದನದ ಕಡೆಗೆ ನೋಡುತ್ತಿದ್ದಾರೆ. ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ನನ್ನ ಗೌರವ ಕಾಪಾಡುವಂಥದ್ದು ತಮ್ಮ ಕೈಯಲ್ಲಿದೆ. ತಾವು ಮಾನಯ ಮುಖ್ಯಮಂತ್ರಿಯವರಿಗೆ ಹೇಳಬೇಕು. ಇಲ್ಲಿ ಮಾನ್ಯ ಸುರೇಶ್‌ಕುಮಾರ್‌ರವರು ಕುಳಿತುಕೊಂಡು ಬರೆದುಕೊಳ್ಳಬಹುದು. ಆದರೆ ನಾನು ಇಲ್ಲಿ . ಮಾತನಾಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಎದುರುಗಡೆ ಇರಬೇಕು. ಅವರು ಇಲ್ಲದೇ ಇದ್ದಾಗ ಚರ್ಚೆಗೆ ತೂಕ, ಅರ್ಥ, ಗಾಂಭೀರ್ಯತೆ, ಬರುವುದಕ್ಕೆ ಸಾಧ್ಯವೇ ಇಲ್ಲ. ನಾನು ಅರ್ಧ ಗಂಟೆ ಕಾಯುತ್ತೇನೆ, House adjourn ಮಾಡಿ, ಅವರನ್ನು ಕರೆಸಿ. What is this?

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಪತ್ರವನ್ನು ಕೊಟ್ಟಿದ್ದಾರೆ. ನಾನು ಅದನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಾವು ಈ ಭಾಗದಲ್ಲಿದ್ದಾಗ ಅಂದಿನ ಮುಖ್ಯಮಂತ್ರಿಗಳು ಯಾವ ಕಾರ್ಯಕ್ರಮಕ್ಕೂ ಹೋಗಲೇ ಇಲ್ಲವಾ? ಎಲ್ಲಾ

ವಿಷಯಗಳು ಪ್ರಮುಖವಾದದ್ದೆ, ಪ್ರಮುಖವಿಲ್ಲದ್ದು ಯಾವುದು ಇಲ್ಲ, ಎಲ್ಲಾ ವಿಷಯಗಳು ಪ್ರಮುಖವಾಗಿರುವುದೇ ಇರುವುದು.

ಶ್ರೀ ಕೆ ಎಂ ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಸೋಮವಾರ ಮಾತನಾಡಲು ಅವಕಾಶ ಕೊಡಿ. ಈಗ ನಮ್ಮ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ದಯವಿಟ್ಟು ಇವತ್ತು ಇತರೆ ಪಕ್ಷಗಳವರೆಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ದಯಮಾಡಿ ನಾನು ಹೇಳುವಂಥದ್ದು ಏನೆಂದರೆ, ಯಾವುದಕ್ಕೂ ಸಹಕಾರ ಕೊಡದಿದ್ದರೂ, ಅಧ್ಯಕ್ಷರು ನಮ್ಮ ಕಡೆಗೆ ನೋಡಿ ಸಹಕಾರ ಕೊಡಬೇಕು. ನಾನು ಆಗಲೇ ಕೇಂದ್ರ ಸರ್ಕಾರದ ಸಚಿವರುಗಳ ಪತ್ರಗಳನ್ನು ಸಭೆಯಲ್ಲಿ ಮಂಡನೆ ಮಾಡಿ ಎಂದು ಹೇಳಿದೆ. ಅದರ ಜೊತೆಯಲ್ಲಿ ಕೇಂದ್ರಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವರಾಗಿರುವಂಥ ಶ್ರೀ ಜಯರಾಂ ರಮೇಶ್‌ರವರು ಪರಿಸರಕ್ಕೆ ಸಂಬಂಧಪಟ್ಟಂತೆ ಮೂರು ಕಾಗದಗಳನ್ನು ಬರೆದಿದ್ದಾರೆ. ನಾನು ಹೇಳುವಂಥಾದ್ದನ್ನು ಕೇಳುವುದಕ್ಕೆ ಸರ್ಕಾರದ ಕಿವಿ ಕೇಳುತ್ತಿಲ್ಲ, ಅದೇ problem ಬಂದಿರುವಂಥದ್ದು.

ಶ್ರೀ ಎಸ್ ಸುರೇಶ್ ಕುಮಾರ್: ಮಾನ್ಯ ಜಯಚಂದ್ರರವರೆ, ತಾವು ಈ ವಿಷಯವನ್ನು ಎರಡನೇ ಬಾರಿ ಪ್ರಸ್ತಾಪ ಮಾಡುತ್ತಿದ್ದೀರಿ. ಕೇಂದ್ರ ಸರ್ಕಾರದ ಸಚಿವರು ಮೂರು ಪತ್ರಗಳನ್ನು ಬರೆದಿದ್ದಾರೆ. ಈಗ latest ಪತ್ರ ನಿನ್ನೆ ಬರೆದಿದ್ದಾರೆ. ಆ ಮೂರು ಪತ್ರಗಳನ್ನು ಸದನದ ಮುಂದೆ ಇಡಿಯೆಂದು ಹೇಳಿದ್ದೀರಿ. ಅದನ್ನು ನಾನು ಕೇಳಿಸಿಕೊಂಡಿದ್ದೇನೆ.

ಶ್ರೀ ಟಿ ಬಿ ಜಯಚಂದ್ರ: ಎರಡನೆಯದು ಮಾನ್ಯ ಜಯರಾಂ ರಮೇಶ್‌ರವರು ಬರೆದಿರುವಂಥ ಪತ್ರದ ಬಗ್ಗೆ ಕೇಳಿದ್ದೇನೆ.

ಶ್ರೀ ಎಸ್ ಸುರೇಶ್‌ಕುಮಾರ್: ಆಯಿತು, ಕೇಂದ್ರ ಸರ್ಕಾರದಿಂದ ಯಾವ್ಯಾವ ಪತ್ರಗಳು ಬಂದಿವೆಯೋ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಈಗ ನಿಮ್ಮ ಆಗ್ರಹ ಇದೆಯೋ ಅದನ್ನು ತಿಳಿಸುತ್ತೇನೆ. ಈಗ ಪ್ರಶ್ನೆ ಇರುವಂಥದ್ದು ಏನೆಂದರೆ, ಮಾನ್ಯ ಸಿದ್ದರಾಮಯ್ಯನವರು ಇಲ್ಲಿ ಅಧಿಕಾರಿಗಳು ಯಾರು ಇಲ್ಲವೆಂದು ತಿಳಿಸಿದರು. ಅಷ್ಟರಲ್ಲಿ ಮಾನ್ಯ ಮುಖ್ಯಮಂತ್ರಿಯವರು

ಸಭಾಧ್ಯಕ್ಷರಿಗೆ ಬರೆದಿರುವ ಪತ್ರದ ಬಗ್ಗೆ ತಮ್ಮ ಗಮನಕ್ಕೆ ಬಂದಿತ್ತು. ಆಗ ನಾವು ಅಧಿಕಾರಿಗಳು ಯಾರು ಇಲ್ಲವೆಂದು ಹೇಳಿದ್ದೀರಿ. ಈಗ ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಇಲ್ಲಿದ್ದಾರೆ. ಗೃಹ ಇಲಾಖೆಯ ಕಾರ್ಯದರ್ಶಿಗಳೂ ಇದ್ದಾರೆ, Mines & Geology Director ಇದ್ದಾರೆ. ತಾವು ದಯವಿಟ್ಟು ಚರ್ಚೆಯನ್ನು ಮುಂದುವರೆಸಿ. ತಮಗೆ ಅಕಸ್ಮಾತ್ ಆಗದಿದ್ದರೆ, ತಾವು ಮಾನ್ಯ ಮುಖ್ಯಮಂತ್ರಿಯವರು ಬಂದಾಗ ಮಾತನಾಡುತ್ತೇನೆಂದು ಹೇಳುವುದಾದರೆ, ಬೇರೆ ಸದಸ್ಯರು ಮಾತನಾಡಲಿ. ಈಗ ಇದು ಮಹತ್ವದ ಚರ್ಚೆಯಾಗಬೇಕು, ಪಟ್ಟಿಯಲ್ಲಿ ಬಹಳಷ್ಟು ಜನರು ಮಾತನಾಡುವವರು ಇದ್ದಾರೆ. ನೀವು ಅವರಿಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಕೊಡಿ, ಚರ್ಚೆ ಪ್ರಾರಂಭವಾಗಲಿ.

ಶ್ರೀ ಸಿದ್ದರಾಮಯ್ಯ: ನನ್ನ ಗಂಟಲು ಸ್ವಲ್ಪ ಕಡಿಮೆಯಾಗಿರುವುದರಿಂದ ಸರಿಯಾಗಿ ಕೇಳಿಸುತ್ತಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಿನ್ನೆ ಭಾಷಣ ಜೋರಾಗಿ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೆ, ನಿನ್ನೆ ನೀವು ಹುಟ್ಟುಹಬ್ಬವನ್ನು ಮಾಡಿಕೊಂಡಿದ್ದೀರಾ? ಈಗ ನೀವು 60ನೇ ವರ್ಷಕ್ಕೆ ಕಾಲಿಟ್ಟಿದ್ದೀರಿ, ಈಗಲಾದರೂ ನೀವು ಯಜಮಾನರ ರೀತಿಯಲ್ಲಿ ಇರಿ. ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ since it is a very serious and sensational matter, ಈ ವಿಷಯ ಇಡೀ ರಾಜ್ಯದ ಜನರ ಗಮನ ಸೆಳೆದಿರುವುದರಿಂ ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರಬೇಕಾಗುತ್ತದೆ. ಮಾನ್ಯ ಸುರೇಶ್‌ಕುಮಾರ್‌ರವರೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಅಧಿಕಾರಿಗಳು ಇರಬೇಕಾಗುತ್ತದೆ.

ಶ್ರೀ ಎಸ್ ಸುರೇಶ್‌ಕುಮಾರ್: ನಾವು ಆ ಸ್ಥಾನದಲ್ಲಿ ಮಾನ್ಯ ಜಯಚಂದ್ರರವರ ಜೊತೆಯಲ್ಲೇ ಕುಳಿತುಕೊಂಡು ವಿಷಯ ಮಹತ್ವದ್ದು ಎಂದು ಮಾನ್ಯ ಮುಖ್ಯಮಂತ್ರಿಗಳು ಇರಬೇಕೆಂದು ಆಗ್ರಹ ಮಾಡಿದ್ದೇವೆ. ನಾವು ಈ ವಿಷಯ ಮಹತ್ವದ್ದು ಎಂದೇ ಚರ್ಚೆಗೆ ಸಿದ್ಧವೆಂದು ಹೇಳಿರುವುದು. ಆ ರೀತಿ ಇರುವಾಗ ಮಾನ್ಯ ಮುಖ್ಯಮಂತ್ರಿಯವರು ಸಭಾಧ್ಯಕ್ಷರಿಗೆ ಅನಿವಾರ್ಯ ಕಾರಣ ಏನೆಂಬುದನ್ನು ತಿಳಿಸಿ ಪತ್ರವನ್ನು ಕೊಟ್ಟಿದ್ದಾರೆ. ಇಲ್ಲಿಗೆ ಮಾನ್ಯ

ಮುಖ್ಯಮಂತ್ರಿಯವರು ಬಂದಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತೇನೆಂದು ಹೇಳುವುದಾದರೆ, ಬೇರೆಯವರು ಚರ್ಚೆಯಲ್ಲಿ ಭಾಗವಹಿಸಲಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವರು ಏನು ಮಾಡಿದರೆಂದರೆ, ನಾವು ನಿಯಮ 60ರ ಅಡಿಯಲ್ಲೇ ಚರ್ಚೆಯಾಗಬೇಕೆಂದು ಪಟ್ಟು ಹಿಡಿಯುತ್ತೇವೆ. ಆಗ ನಾವು ಹೇಗೋ ತಪ್ಪಿಸಿಕೊಂಡು ಬಿಡೋಣವೆಂದು ಅಂದುಕೊಂಡಿದ್ದರು.

ಶ್ರೀ ಎಸ್ ಸುರೇಶ್‌ಕುಮಾರ್: ಇಲ್ಲ

ಶ್ರೀ ಸಿದ್ದರಾಮಯ್ಯ: ನಾವು ಯಾವಾಗ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಸಿದ್ಧವಾದವೋ, ಆಗ ಮಾನ್ಯ ಮುಖ್ಯಮಂತ್ರಿಗಳೇ ಇಲ್ಲ.

ಶ್ರೀ ಎಸ್ ಸುರೇಶ್‌ಕುಮಾರ್: ನಾವು ಈಗ ಒಂದು ತಪ್ಪು ಮಾಡಿದೆವೆಂದು ಅನಿಸುತ್ತಿದೆ. ನಾವು ನಿಯಮ 60 ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟು ಬಿಡಬೇಕಾಗಿತ್ತು. ಆಗ ಬಹಳ ಚೆನ್ನಾಗಿ ಆಗುತ್ತಿತ್ತು.

ಶ್ರೀ ಸಿದ್ದರಾಮಯ್ಯ: ಮತ್ತೆ ಏಕೆ ಬಿಟ್ಟಿರಿ?

ಶ್ರೀ ಎಸ್. ಸುರೇಶ್‌ಕುಮಾರ್: ಇರಲಿ ಬಿಡಿ.

ಶ್ರೀ ಸಿದ್ದರಾಮಯ್ಯ: ಎರಡು ದಿವಸಗಳನ್ನು ಹಾಳು ಮಾಡಿದಿರಲ್ಲ.

ಶ್ರೀ ಎಸ್ ಸುರೇಶ್‌ಕುಮಾರ್: ಆ ಒಂದು ಸ್ಥಿತಿ ಮುಗಿದು ಹೋಗಿದೆ. ಆಗ ಪ್ರತಿ ಪಕ್ಷದ ವಿಷಯವೆಲ್ಲಾ ಗೊತ್ತಾಗಿಬಿಡುತ್ತಿತ್ತು, ಇರಲಿ ಬಿಡಿ. ಈಗ ಮಾನ್ಯ ಮುಖ್ಯಮಂತ್ರಿಯವರು ಅನುಮತಿ ಪತ್ರವನ್ನು ಕೊಟ್ಟಿದ್ದಾರೆ. ತಾವು ದಯಮಾಡಿ ಚರ್ಚೆಯನ್ನು ಪ್ರಾರಂಭ ಮಾಡಿ, ಇಲ್ಲವೆಂದರೆ ಬೇರೆಯವರು ಪ್ರಾರಂಭ ಮಾಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹಾಗಾದರೆ ಸಭೆಯನ್ನು adjourn ಮಾಡಿ ಮುಖ್ಯಮಂತ್ರಿಯವರು ಬರಲಿ, ಮತನಾಡುತ್ತೇನೆ.

ಶ್ರೀ ಎಸ್ ಸುರೇಶ್‌ಕುಮಾರ್: ಇಲ್ಲ adjourn ಪ್ರಶ್ನೆ ಇಲ್ಲ. ಈ ಪಟ್ಟಿಯಲ್ಲಿ ಬಹಳ ದೊಡ್ಡ voter list ರೀತಿಯಲ್ಲಿ ಹೆಸರುಗಳು ಇವೆ, ಅವರೆಲ್ಲಾ ಮಾತನಾಡಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಹಾಗಾದರೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಬೇರೆಯವರು ಮಾತನಾಡುವುದಕ್ಕೆ ಕರೆಯುತ್ತೇನೆ.

ಶ್ರೀ ಎಸ್ ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಬೇರೆ ಸದಸ್ಯರನ್ನು ಮಾತನಾಡಲು ಕರೆಯಿರಿ.

SRI SIDDARAMAIAH:- Leader of the opposition complete ಮಾಡದೇ ಬೇರೆಯವರನ್ನು ಮಧ್ಯದಲ್ಲಿ ಕರೆಯುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ನೀವು ಆಮೇಲೆ ಮಾತನಾಡಿ. ಈಗ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನಿನ್ನೆ ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರು ಪೂರ್ತಿ ಚರ್ಚೆ ಆಗುವವರೆಗೆ ಕುಳಿತ್ತಿದ್ದರು. ನೀವು ಈಗ ಮಾತನಾಡಿ, ಅವರು ಮಾತನಾಡುವಾಗ ನಿಮ್ಮ ಎಲ್ಲಾ ವಿಚಾರಗಳಿಗೂ ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಅವರು ಇಲ್ಲದೇ ಹೇಗೆ ಉತ್ತರವನ್ನು ಕೊಡುತ್ತಾರೆ?

ಶ್ರೀ ಬಸವರಾಜ ಬೊಮ್ಮಾಯಿ: ನೀವು ಮಾತನಾಡಿ, ಅವರು ಎಲ್ಲಾ ಅಂಶಗಳನ್ನು ಸೇರಿಸಿ ಉತ್ತರ ಕೊಡುತ್ತಾರೆ. ಹಿಂದೆ ಎಲ್ಲಾ ಆ ರೀತಿ ಆಗಿಲ್ಲವೇ? ನೀವು senior ಇದ್ದೀರಿ, ಹೀಗೆ ಹಠ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಬಸವರಾಜ ಬೊಮ್ಮಾಯಿರವರೆ, ನೀವು ಕುಳಿತುಕೊಳ್ಳಿ, ನೀವು ನಮ್ಮ ಜೊತೆಯಲ್ಲಿ ಇದ್ದಾಗ ಒಂದು ರೀತಿ ಇದ್ದಿರಿ, ಈಗ ಒಂದು ರೀತಿ ಆಗಿದ್ದೀರಿ. ಈ ರೀತಿ ಆದರೆ ಹೇಗೆ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಿಮ್ಮ ಜೊತೆಗೆ ಇದ್ದದ್ದಕ್ಕಿಂತ ಈಗ ಜಾಸ್ತಿ ಬುದ್ಧಿ ಇದೆ.

ಶ್ರೀ ಸಿದ್ದರಾಮಯ್ಯ: ನಿಮಗೆ ಬುದ್ಧಿ ಎಲ್ಲಾ ತುಕ್ಕು ಹಿಡಿದು ಹೋಗಿತ್ತು. ಅವರು ಬಂದ ಮೇಲೆ ನಿಮಗೆಲ್ಲಾ ಸಾಣೆ ಹಿಡಿದಿದ್ದಾರೆ. ನಾನು ಇಲ್ಲಿ ಏನೋ ಆರೋಪ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಬಾರದು. ಈ ಚರ್ಚೆಗೆ ಒಂದು ಘನತೆ ಬರಲಿ, ಒಂದು ತೂಕ ಬರಲಿ, ಅರ್ಥ ಪೂರ್ಣವಾಗಲೆಂದು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇದ್ದರೆ ನಮಗೂ ಸಹ ಉತ್ಸಾಹ ಜಾಸ್ತಿಯಾಗುತ್ತದೆ,

inspiration ಜಾಸ್ತಿ ಬರುತ್ತದೆ. ಆ ಕಾರಣಕ್ಕಾಗಿ ನಾನು ಹೇಳುತ್ತಿದ್ದೇನೆಯೇ ಹೊರತು ಬೇರೆ ಏನು ಇಲ್ಲ. ಹಿಂದೆ ವಿರೋಧ ಪಕ್ಷದ ನಾಯಕರುಗಳ ಬಗ್ಗೆ ನಡೆದಿರುವ ನಡೆವಳಿಕೆಗಳನ್ನು ತೆಗೆದು ನೋಡಿ. ಹಿಂದೆ ಎಲ್ಲಾ ಮುಖ್ಯಮಂತ್ರಿಗಳು, ಅವರಿಗೆ ಸಂಬಂಧಪಟ್ಟಂಥ ವಿಷಯಗಳಿದ್ದರೆ, ಸದನದಲ್ಲಿ ಕುಳಿತಿರುತ್ತಿದ್ದರು. ನಾವು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಬಂದರೆ ಹೊರಗಡೆಗೆ ಎದ್ದು ಹೋಗುತ್ತಿರಲಿಲ್ಲ. ಆ ರೀತಿ ನಾವು ಬಜೆಟ್ ಮೇಲೆ ಚರ್ಚೆಯಾಗುವಾಗ ಕುಳಿತಿರುತ್ತಿದ್ದೆವು. ನೀವು ಈ ರೀತಿ callous attitude ತೋರಿಸಿದರೆ, ಇಂಥ ವಿಚಾರಗಳಲ್ಲಿ callous attitude ತೋರಿಸಬಾರದೆಂಬುದು ನನ್ನ ಮನವಿ. ಆಯಿತು, ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು 24 ಗಂಟೆಗಳ ಕಾಲವೂ ಇರುವುದಕ್ಕೆ ಆಗುವುದಿಲ್ಲ. I can understand the difficulties. But what is the seriousness of the discussion? ಅದಕ್ಕೂ ನೀವು ಪತ್ರವನ್ನು ಕೊಟ್ಟಿದ್ದಾರೆಂದು ಹೇಳುತ್ತೀರಿ. ನಾನು ಪತ್ರವನ್ನು ಕೊಡಬೇಡಿಯೆಂದು ಹೇಳುವುದಿಲ್ಲ. ಇದಕ್ಕೆ ಚರ್ಚೆ ಮಾಡಲ್ಲವೆಂದು ಹೇಳುತ್ತೀರಿ, ಮಾಡಿದರೆ ಇರುವುದಿಲ್ಲವೆಂದು ಹೇಳುತ್ತೀರಿ. ತಾವು ಹೇಳಿದ ಮೇಲೆ ಅಧಿಕಾರಿಗಳು ಬಂದು ಕುಳಿತುಕೊಳ್ಳುತ್ತಾರೆ, ಇದರ ಮೇಲೆ ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಿಮಗೆ ಬಿಡುತ್ತೇನೆ. I leave it to you. ಈ ರೀತಿಯಾದರೆ ವಿಧಾನಸಭೆಯನ್ನು ನಡೆಸುವುದೇ ಬೇಡವೆಂದು ನನಗನಿಸುತ್ತದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಅನಿವಾರ್ಯ ಕಾರಣದಿಂದ ಸದನಕ್ಕೆ ಬರುವುದಕ್ಕೆ ಆಗಿಲ್ಲ. ಅವರು ಪತ್ರವನ್ನು ಕೊಟ್ಟಿರುವುದನ್ನು ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ: ನಾನು ಅವರ ಕಾರಣವನ್ನು dispute ಮಾಡುವುದಿಲ್ಲ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಚರ್ಚೆಯನ್ನು ಮುಂದುವರೆಸಿ, ಈಗ ಇತರ ಸದಸ್ಯರು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ: ಇದು ಪದ್ಧತಿನಾ? ನೀವೇ ಹೇಳಿ.

ಅಧ್ಯಕ್ಷರು: ನಿನ್ನೆ ಹಾಗೆ ಮಾಡಿದ್ದೇವೆ. ನೀವು ಅರ್ಧಕ್ಕೆ ಚರ್ಚೆ ನಿಲ್ಲಿಸಿದ ಮೇಲೆ ಬೇರೆ ವಿಷಯವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು: Calling attention ಇರುವುದು ಮಧ್ಯಾಹ್ನ ಎಂದು ಇರುವುದರಿಂದ ಈಗ ಉತ್ತರ ಬಂದಿಲ್ಲ.

ಶ್ರೀ ಸಿದ್ದರಾಮಯ್ಯ: ಇವತ್ತಿನ calling attentionಗಳಿಗೆ ಉತ್ತರ ಬರದಿದ್ದರೆ ಹೇಗೆ? ಸರ್ಕಾರ ready ಇರಬೇಕಲ್ಲವೇ? Suppose, ಈ ವಿಚಾರ adjourn ಆಯಿತು ಎಂದರೆ ಆಗ next agenda ತೆಗೆದುಕೊಳ್ಳಬೇಕಲ್ಲವೇ? ಇದಕ್ಕೆ ready ಇಲ್ಲವೆಂದರೆ ಹೇಗೆ? If the Government is not ready for today's agenda…

ಶ್ರೀ ಎಸ್ ಸುರೇಶ್‌ಕುಮಾರ್: ಬೇರೆಯವರು ಚರ್ಚೆ ಮಾಡಲು ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ: ಅದು ಹೇಗಾಗುತ್ತದೆ? ನೀವು ಯಾವಾಗಲಾದರೂ ಹಾಗೆ ಮಾಡಿರುವಿರಾ? ಪ್ರತಿ ಪಕ್ಷದ ನಾಯಕರು ಅರ್ಧ ಮಾತನಾಡಿರುವಾಗ ಬೇರೆಯವರು ಮಾತನಾಡಿದ್ದಾರೆಯೇ?

ಶ್ರೀ ಎಸ್ ಸುರೇಶ್ ಕುಮಾರ್: ಹಿಂದೆ ನಿಮ್ಮ ಜೊತೆಯಲ್ಲಿಯೇ ನಾವು ಪ್ರತಿಪಕ್ಷದಲ್ಲಿದ್ದಾಗ ಇದು ಆಗಿದೆ.

ಶ್ರೀ ಸಿದ್ದರಾಮಯ್ಯ: ಆಗಿದ್ದರೆ, ತೋರಿಸಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ನೀವೇ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ಇಲ್ಲ, it is impossible. ಕೊನೆಯಲ್ಲಿ ಭಾಷಣ ಮಾಡಿರುವುದು ನಿಜ. ಆದರೆ ಭಾಷಣವನ್ನು ಅರ್ಧಕ್ಕೆ ನಿಲ್ಲಿಸಿಬಿಟ್ಟು, ಇನ್ನೊಬ್ಬರು ಮಾತನಾಡಿ ಎಂದು ಹೇಳಿಲ್ಲ. Never. ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಗೆ ಅದು ಗೊತ್ತಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನೇ ಕೇಳಿಸಿಕೊಂಡಿದ್ದೇನೆ, ಕಳೆದ ಬಜೆಟ್ ಮೇಲೆ ಭಾಷಣ ಮಾಡುವಾಗ ತಾವು, ನಾನು ಕೊನೆಯಲ್ಲಿ ಭಾಷಣ ಮಾಡುತ್ತೇನೆ, ನಮ್ಮ ಸದಸ್ಯರೆಲ್ಲ ಭಾಷಣ ಮಾಡಲಿ ಎಂದು ಹೇಳಿದ್ದಿರಿ.

ಶ್ರೀ ಸಿದ್ದರಾಮಯ್ಯ: ಇವತ್ತು ಮುಖ್ಯಮಂತ್ರಿಗಳು ಬರುವುದಿಲ್ಲವೇ?

ಅಧ್ಯಕ್ಷರು: ಅವರು ಬರುವುದು ಲೇಟ್ ಆಗುತ್ತದೆ.

ಶ್ರೀ ಸಿದ್ದರಾಮಯ್ಯ: ಹಾಗಿದ್ದರೆ ಇದನ್ನು ಸೋಮವಾರ ತೆಗೆದುಕೊಳ್ಳೋಣ. ಆಗ calling attention ತೆಗೆದುಕೊಳ್ಳಿ.

ಶ್ರೀ ಎಸ್ ಸುರೇಶ್ ಕುಮಾರ್: ಸಿದ್ದರಾಮಯ್ಯನವರೇ ಬೇರೆಯವರು ಚರ್ಚೆ ಮಾಡಲಿ.

ಶ್ರೀ ಸಿದ್ದರಾಮಯ್ಯ: ಅದು ಹೇಗಾಗುತ್ತದೆ?

ಶ್ರೀ ಎಸ್ ಸುರೇಶ್ ಕುಮಾರ್: ನಿನ್ನೆ ಸಂಜೆ ನಾನು ಇಲ್ಲಿರಲಿಲ್ಲ, ಕೌನ್ಸಿಲ್‌ನಲ್ಲಿದ್ದೆ. ಆಗ ನೀವು, ನನ್ನ ಗಂಟಲು ಸರಿಯಿಲ್ಲ, ನಾನು ನಾಳೆ ಮುಂದುವರೆಸುತ್ತೇನೆ ಎಂದು ಹೇಳಿದಿರಿ. ಆಗ ಬೇರೆಯವರು ಮಾತನಾಡಲು ಕರೆದರು. ಬೇರೆಯವರು prepare ಆಗಿರದಿದ್ದುದರಿಂದ ಬೇರೆ subject ತೆಗೆದುಕೊಂಡರು.

ಶ್ರೀ ಸಿದ್ದರಾಮಯ್ಯ: ನನಗೆ pain ಆದರೂ ನಾನು ನಿನ್ನೆ ಸಂಜೆ ಐದು ಗಂಟೆಯವರೆಗೆ ಮಾತನಾಡಿದೆ. ನಾನು ಒಂದೂ ಮುಕ್ಕಾಲು ಗಂಟೆ ಮಾತನಾಡಿದೆ ಮೇಲೆ, pain ಜಾಸ್ತಿಯಾಯಿತು ಎಂದು ಹೇಳಿ ಸಂಜೆ ಐದು ಗಂಟೆಗೆ ಅಧ್ಯಕ್ಷರನ್ನು request ಮಾಡಿಕೊಂಡೆ.

ಶ್ರೀ ಎಸ್ ಸುರೇಶ್ ಕುಮಾರ್: ಸೋಮವಾರದವರೆಗೂ ನಿಮಗೆ rest ಸಿಗಲಿ. ಈಗ ಬೇರೆಯವರು ಮಾತನಾಡಲಿ.

ಅಧ್ಯಕ್ಷರು: ಬೇರೆಯವರು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ: ಈಗ calling attention ಮಾಡಿ. ಪ್ರತಿಪಕ್ಷದ ನಾಯಕರ ಭಾಷಣ incomplete ಆಗಿರುವಾಗ, ಅದೇ subject ಮೇಲೆ ಬೇರೆಯವರು ಮಾತನಾಡುವುದು ಸಮಂಜಸವೇ ಎಂದು ನೀವೇ ಹೇಳಿ.

ಶ್ರೀ ಎಸ್ ಸುರೇಶ್‌ಕುಮಾರ್: ಸಮಂಜಸ ಹೌದೋ, ಅಲ್ಲವೇ ಎನ್ನುವುದು ಬೇರೆ ಪ್ರಶ್ನೆ. ನಿಮ್ಮ ಆರೋಗ್ಯದ ಹಿನ್ನಲೆಯಲ್ಲಿ, ನಿಮಗೆ ಬಂದಿರುವ ಸಮಸ್ಯೆಯ ಹಿನ್ನಲೆಯಲ್ಲಿ ನಿಮಗೆ 48 ಗಂಟೆ reset ಸಿಗಲಿ ಎಂದು ಹೇಳುತ್ತಿದ್ದೇವೆ, ಈಗ ಬೇರೆಯವರು ಮಾತನಾಡಲಿ.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಬಗ್ಗೆ ಕಳಕಳಿಯಿಂದ ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ನೀವು ಅವರ ಮಾತು ಕೇಳುವುದಕ್ಕೆ ಹೋಗಬೇಡಿ.

ಶ್ರೀ ವಿ ಶ್ರೀನಿವಾಸ ಪ್ರಸಾದ್: ಈಗ ಬೇರೆ ವಿಷಯವನ್ನು ತೆಗೆದುಕೊಂಡು ಚರ್ಚೆ ಮಾಡಬಹುದೇ ಹೊರತು, ಪ್ರತಿಪಕ್ಷದ ನಾಯಕರ ಭಾಷಣ ಅರ್ಧವಾಗಿರುವಾಗ ಬೇರೆಯವರದು ಅದೇ ವಿಷಯದ ಮೇಲೆ ಮಾತನಾಡಲು ಬರುವುದಿಲ್ಲ.

ಶ್ರೀ ಎಸ್ ಸುರೇಶ್ ಕುಮಾರ್: ಪರಿಸ್ಥಿತಿ ಏನೆಂದು ಪರಸ್ಪರ ಗೊತ್ತಿದೆ, ಹಾಗಾಗಿ ಹೇಳುತ್ತಿದ್ದೇವೆ.

ಶ್ರೀ ವಿ ಶ್ರೀನಿವಾಸ ಪ್ರಸಾದ್: Chief Ministerಗೆ seriousness ಇಲ್ಲ. ನಿನ್ನೆ Chief Minister ಹೇಳಿದುದನ್ನು ಕೇಳಿದೆನಲ್ಲ. ಲೋಕಾಯುಕ್ತರ ರಾಜೀನಾಮೆ ಹಿನ್ನಲೆಯಲ್ಲಿ ನಿನ್ನೆ ಪ್ರತಿಪಕ್ಷದ ನಾಯಕರು ಸುಮಾರು ಒಂದೂಮುಕ್ಕಾಲು ಗಂಟೆ ಮಾತನಾಡಿದ್ದಾರೆ. ಬೇಲಿಕೇರಿ ಬಂದರು ವಿಷಯವನ್ನು ಚರ್ಚೆ ಮಾಡುವಾಗ Chief Ministerರವರು ಇದೊಂದು quiz competitionನಂತೆ say 'Yes' or 'No' ಎಂದು ಹೇಳುವಂತೆ ಹೇಳುತ್ತಾರೆ. ಇಲ್ಲಿ ವಿಷಯ ಬಂದಿರುವುದು, ಲೋಕಾಯುಕ್ತರಿಗೆ ಅಧಿಕಾರ ಕೊಟ್ಟಿಲ್ಲ, ಏನಾಗಬೇಕು ಎನ್ನುವುದಕ್ಕಷ್ಟೇ ಸೀಮಿತವಾಗಿರಬೇಕು ಎಂದು ನಿನ್ನೆ ಅವರು ಹೇಳಿದರು. ಅದು ಆ ರೀತಿ ಅಲ್ಲ. ನಾವು ಯಾವ ವಿಷಯಕ್ಕೆ ಯಾವ ರೀತಿ Motion move ಮಾಡಿದ್ದೇವೆ ಎಂದು ನೋಡಿ. Chief Ministerರವರಿಗೆ ಇದರ ಬಗ್ಗೆ ತೀವ್ರತೆಯೇ ಇಲ್ಲ ಎನ್ನುವುದಕ್ಕಾಗಿ ಇದನ್ನು ಹೇಳಿದೆ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿದರು)

ಶ್ರೀ ವಿ ಶ್ರೀನಿವಾಸ್ ಪ್ರಸಾದ್: ನೋಡಿ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಅವರು ಬೇರೆಲ್ಲೋ ಹೋಗಿದ್ದಾರೆ ಎಂದು ನೀವು ಹೇಳಿದಿರಿ.

ಶ್ರೀ ಎಸ್ ಸುರೇಶ್ ಕುಮಾರ್: ನಿಮ್ಮ ಕೂಗು ಅವರಿಗೆ ಕೇಳಿಸಿದೆ.

ಅಧ್ಯಕ್ಷರು: ಆಯಿತು, ವಿರೋಧ ಪಕ್ಷದ ನಾಯಕರೇ ಈಗ ನೀವು ಮಾತನಾಡಿ.

ಶ್ರೀ ಸಿ ಎಸ್‌ಪುಟ್ಟೇಗೌಡ: ಮುಖ್ಯಮಂತ್ರಿಗಳಿಗೆ ಇವರೇ ದಾರಿ ತಪ್ಪಿಸುತ್ತಿದ್ದಾರೆ ಎಂದು ಕಾಣುತ್ತಿದೆ. ಅವರು ಸರಿಯಾಗಿ ಇಲ್ಲಿಗೆ ಬಂದಿದ್ದಾರೆ.

ಶ್ರೀ ಟಿ ಬಿ ಜಯಚಂದ್ರ: ಮುಖ್ಯಮಂತ್ರಿಗಳು ಬಂದಾಗ ಕಾಗದವನ್ನು place ಮಾಡಿಸುತ್ತೇನೆ ಎಂದು ಹೇಳಿದ್ದೀರಿ, ದಯಮಾಡಿ ಅದನ್ನು ಸದನದ ಮುಂದೆ ಇಡಿಸಿ, ನಮಗೂ ಚರ್ಚೆಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ: ನೋಡಿ, ಈಗ ನಾನು ಎಷ್ಟೇ ಕಷ್ಟವಾದರೂ ಬಿಡುವುದಿಲ್ಲ, ಮಾತನಾಡುತ್ತೇನೆ. ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ, "ಪ್ರಜಾವಾಣಿ" ದಿನಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಏನೆಂದರೆ, "ಬಳ್ಳಾರಿ ಸೇರಿದಂತೆ ಎಲ್ಲ ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ: ರಾಜ್ಯಕ್ಕೆ ಸೂಚನೆ, ಸಿಬಿಐ ತನಿಖೆ: ಕೇಂದ್ರ ಒತ್ತಡ, ಕ್ರಮ ಕೈಗೊಳ್ಳದಿದ್ದರೆ ಇಡೀ ವ್ಯವಸ್ಥೆ ಕುಸಿತ, ಕಟ್ಟುನಿಟ್ಟಾಗಿ ಜಾರಿಯಾಗದ ನಿಯಮ, ಸಿ.ಎಂ.ಗೆ ಕೇಂದ್ರ ಭೂ ವಿಜ್ಞಾನ ಖಾತೆ ಸಚಿವರ ಮೂರನೇ ಪತ್ರ" ಎಂದೆಲ್ಲಾ ಬಂದಿದೆ. ದಯವಿಟ್ಟು ನೀವು ಆ ಪತ್ರವನ್ನು ಸದನದ ಮುಂದೆ ಇಟ್ಟರೆ ನಮಗೆ ಅನುಕೂಲವಾಗುತ್ತದೆ. ಮುಖ್ಯಮಂತ್ರಿಗಳೇ, ಅದನ್ನು ತರಿಸುವಿರಾ?

ಶ್ರೀ ಬಿ ಎಸ್ ಯಡಿಯೂರಪ್ಪ: ನಮಗೆ ಇನ್ನೂ ಬಂದಿಲ್ಲ.

ಶ್ರೀ ಸಿದ್ದರಾಮಯ್ಯ: ಬಂದಿಲ್ಲವೇ? ಹಾಗಿದ್ದರೆ ಪತ್ರಿಕೆಯಲ್ಲಿ ಬಂದಿರುವುದು ಸುಳ್ಳೇ?

ಶ್ರೀ ಬಿ ಎಸ್ ಯಡಿಯೂರಪ್ಪ: ಯಾವ ಸಮಯದಲ್ಲಿ ಯಾವ ಪತ್ರವನ್ನು ಈ ಮನೆಯಲ್ಲಿ ಇಡಬೇಕು ಎನ್ನುವುದನ್ನು verify ಮಾಡಿ ಬಂದಂಥ ಪತ್ರಗಳನ್ನು ಸೂಕ್ತವಾದ ಕಾಲದಲ್ಲಿ ಈ ಮನೆಯ ಮುಂದೆ ಇಡುತ್ತೇನೆ. ಮೊದಲು ನೀವು ಚರ್ಚೆ ಪ್ರಾರಂಭ ಮಾಡಿ. ಯಾವುದೇ ಪತ್ರವಾದರೂ ನನಗೆ ಬರುವುದಕ್ಕೆ ಮುಂಚೆ ನಿಮಗೆ ಅದರ copy ಬಂದಿರುತ್ತದೆ. ನಿಮ್ಮ ಹತ್ತಿರ ಇದ್ದರೆ ನನಗೆ ಕೊಟ್ಟುಬಿಡಿ. ಇಲ್ಲದಿದ್ದರೆ ನಾನು collect ಮಾಡಿ ನಿಮಗೆ ಕೊಡುತ್ತೇನೆ.

ಶ್ರೀ ಟಿ ಬಿ ಜಯಚಂದ್ರ: ನಿಮ್ಮ ಹತ್ತಿರ ಇರುವುದು ಒರಿಜಿನಲ್ಲೋ, ಅಲ್ಲವೋ ಎನ್ನುವ ಬಗ್ಗೆ ನಮಗೆ ಅನುಮಾನ ಇದೆ, ಅದಕ್ಕೋಸ್ಕರ ನಿಮ್ಮನ್ನು ಕೇಳುತ್ತಿದ್ದೇವೆ. ನೀವು ಸಭೆಯ ಮುಂದೆ ಇಟ್ಟರೆ ಅದಕ್ಕೆ ಅರ್ಥ ಬರುತ್ತದೆ.

Sri B S YEDDYURAPPA: I am telling you honestly. So far I have not received any letter. ನಿಮ್ಮ ಹತ್ತಿರ official copy ಇದ್ದರೆ, we can start the discussion.

ಶ್ರೀ ಸಿದ್ದರಾಮಯ್ಯ: ಪತ್ರಿಕೆಯಲ್ಲಿ ಬಂದಿರುವುದರ ಆಧಾರದ ಮೇಲೆ ನಾನು ಹೇಳಿದೆ, ನಮಗೇನು copy ಬಂದಿಲ್ಲ. ಈಗ ನೀವು ನಮ್ಮ ಕಡೆಗೆ ನೋಡಿ ನಂತರ ಆ ಕಡೆಗೆ ಏಕೆ ನೋಡಿದಿರಿ? ಜನಾರ್ಧನ ರೆಡ್ಡಿಯವರಿಗೇನಾದರೂ ಅದು ಬಂದಿದೆಯೇ?

ಶ್ರೀ ಬಿ ಎಸ್ ಯಡಿಯೂರಪ್ಪ: ಅವರಿಗೂ advance copy ಬಂದಿರಬಹುದು, ಯಾರಿಗೆ ಗೊತ್ತು?

ಶ್ರೀ ಸಿದ್ದರಾಮಯ್ಯ: ಇದ್ದರೆ, ಅವರಿಂದಲೇ ಕೊಡಿಸಿ.

ಶ್ರೀ ಸಿ ಸಿ ಪಾಟೀಲ್: ಸನ್ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಚರ್ಚೆ ನಡೆಯುತ್ತಿರುವುದು ನಿಯಮ 69ರಡಿಯಲ್ಲಿ ಆಗಿರುವುದರಿಂದ ಪರವಾಗಿಲ್ಲ. ನಿಮಯ 60ರಡಿ ಆಗಿದ್ದರೆ ನೀವೊಬ್ಬರೇ ಮಾತನಾಡಬೇಕಿತ್ತು, ಆಗ ಜೆ.ಡಿ.(ಎಸ್)ನವರಿಗೆ ಅವಕಾಶವಿರುತ್ತಿರಲಿಲ್ಲ. ಆಗ ನಿಮಗೆ ಇನ್ನೂ ಸ್ವಲ್ಪ ಸುಸ್ತು ಆಗುತ್ತಿತ್ತು.

ಶ್ರೀ ಸಿದ್ದರಾಮಯ್ಯ: Original B.J.P.ಯವರು ಸುಮ್ಮನಿದ್ದಾರೆ. ನಮ್ಮಿಂದ ಅಲ್ಲಿಗೆ ಹೋಗಿರುವವರದ್ದೇ ಗಲಾಟೆ ಜಾಸ್ತಿಯಾಗಿದೆ. Original ಎಂದರೆ R.S.S.ನಿಂದ ಬಂದವರು.

ಶ್ರೀ ಸಿ ಸಿ ಪಾಟೀಲ್: ನೀವು ಹೇಳಿದ್ದು ನಿಮಗೂ ಅನ್ವಯಿಸುತ್ತದೆ. Original ಕಾಂಗ್ರೆಸ್ಸಿನವರು ಮತ್ತು ಹೊರಗಿನಿಂದ ಬಂದ ಕಾಂಗ್ರೆಸ್ಸಿನವರು ಎಂದು ಇದ್ದಾರೆ.

ಶ್ರೀ ಸಿದ್ದರಾಮಯ್ಯ: "ಪ್ರಜಾವಾಣಿ" ಪತ್ರಿಕೆಯಲ್ಲಿ front pageನಲ್ಲೇ ಬಂದಿದೆ. ಅವರು letter ಇನ್ನೂ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಅಷ್ಟರೊಳಗೆ ಬಂದರೆ ಅದನ್ನು ತಂದು ಇಲ್ಲಿ ಇಡಲಿ.

ಶ್ರೀ ಬಿ ಎಸ್ ಯಡಿಯೂರಪ್ಪ: ಬಂದ ತಕ್ಷಣ ಇಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರು ಹಿಂದೆ ಬರೆದಿರುವ ಎರಡು ಪತ್ರಗಳಿವೆ.

ಶ್ರೀ ಬಿ ಎಸ್ ಯಡಿಯೂರಪ್ಪ: ಅವುಗಳಿಗೆ. ಎಲ್ಲವನ್ನೂ ನಾನು ಕೊಡುತ್ತೇನೆ. ಎಲ್ಲವನ್ನೂ ನಾನು ಉತ್ತರ ಕೊಡುವಾಗ ಕೊಡಬೇಕಲ್ಲವೇ? ಮುಂಚೆಯೇ ಕೊಟ್ಟರೆ ಏನು ಉಪಯೋಗ?

ಶ್ರೀ ಸಿದ್ದರಾಮಯ್ಯ: ಬೇರೆ ಕಡೆ ಇಟ್ಟುಬಿಟ್ಟಿದ್ದೀರೇನೋ, ಇದು ನಿಮ್ಮ ಜ್ಞಾಪಕದಲ್ಲಿರಲಿ, ನಿಮಗೆ ಚರ್ಚೆಗೆ ಅನುಕೂಲವಾಗಲಿ ಎಂದು ಹೇಳಿದೆ. ನಿನ್ನೆ ನಾನು ಪ್ರಸ್ತಾಪ ಮಾಡುತ್ತಿದ್ದೆ, ಬೇಲೇಕೇರಿ ಬಂದರಿನಲ್ಲಿ 8,05,991 ಮೆಟ್ರಿಕ್ ಟನ್ ಅದಿರನ್ನು ಲೋಕಾಯುಕ್ತದವರು ಯು.ವಿ.ಸಿಂಗ್ ನೇತೃತ್ವದಲ್ಲಿ ಅರಣ್ಯ ಇಲಾಖೆಯವರು ಆ ಬಂದರಿನಲ್ಲಿ ದಾಸ್ತಾನು ಆಗಿದ್ದುದನ್ನು Seize ಮಾಡಿದ ಮೇಲೆ ಅಲ್ಲಿಯೇ ಮಹಜರು ಮಾಡುತ್ತಾರೆ. ನರೇಂದ್ರ ಬಿಳಿಯ ಎನ್ನುವವರು Conservator of Port, ಅವರು ಅದಕ್ಕೆ ಸಂಬಂಧಪಟ್ಟವರು. He is the custodian. ನಾಲ್ಕು export ಕಂಪನಿಗಳು: (1)Adani Enterprises (2) Salgaonkar (3) Sri Mallikarjuna Shipping Pvt. Ltd., (4) Rajmahal Silk Plant.

11.40 ಎ.ಎಂ.

ನಾಲ್ಕು export ಕಂಪನಿಗಳು ಇವರು ಕೊಟ್ಟ ಜಾಗದಲ್ಲಿ ಅಂದರೆ stock yard ನಲ್ಲಿ ಆ ಬಂದರಿನಲ್ಲಿ ಇಷ್ಟು ಸಿಗುತ್ತದೆ. ಇಷ್ಟು ಸಿಕ್ಕಿದ ಮೇಲೆ ಅಲ್ಲಿರತಕ್ಕ ಶಾಖಾ ಅರಣ್ಯ ಅಧಿಕಾರಿ ಹೆಸರಿನಲ್ಲಿ Forest Section Officerಗೆ FIR lodge ಮಾಡುತ್ತಾರೆ. That is on 15-03-2010 under Section 2 Clause 7, sub clause (b) & Karnataka Forest Act and Rules ನಡಿ case ಹಾಕುತ್ತಾರೆ, ಮಹಜರು drawn on the same day along with the mahazar FIR

was lodged before the Section Officer, Forest Department. ಅದು ಆದ ಮೇಲೆ Range Forest Officer, Ankola ಅವರು ದಿನಾಂಕ 18.3.2010ರಲ್ಲಿ JMFC Court, Ankola ಅಲ್ಲಿಗೆ ಈ complaint ಅನ್ನು ಕೊಟ್ಟು ಮಹಜರನ್ನು ಕೊಟ್ಟು ಅವರು ಏನು ಮನವಿ ಮಾಡುತ್ತಾರೆಂದರೆ, it is praying to grant permission to investigate the case u/s 155 CRPC. ಅಲ್ಲಿ Civil Judge(Jr.Dn.) JMFC Court, Ankola ಅವರು permitted ಎಂದು ಕೊಡುತ್ತಾರೆ. ಆಮೇಲೆ investigation started. ಆವತ್ತು seize ಆದಂಥ 8,05,991 metric tonne iron ore ಅನ್ನು, Range Forest Officer ರವರು Conservator of Port ರವರಿಗೆ ಇದು ನಿಮ್ಮ ಸ್ವಾಧೀನದಲ್ಲಿಯೇ ಇರಲಿ, ನಾವು seized material ಅನ್ನು ಬೇರೆ ಕಡೆಗೆ ಇಟ್ಟುಕೊಳ್ಳಲಾಗುವುದಿಲ್ಲ, since there is no place ಇದು ನಿಮ್ಮ ಹತ್ತಿರವೇ ಇರಲಿ ದಿನಾಂಕ ದಿನಾಂಕ: 20–03–2010 ಅವರಿಗೊಂದು ಪತ್ರ ಬರೆದು ಕೊಡುತ್ತಾರೆ. "In regard to the above subject it is to state that, the iron ore present in the court premises on 20.3.2010 in accordance with the FIR No.17/2009-10, 15.3.2010, Forest Section Officer, Ankola has been seized in as whereas basis and handed over to you for safe custody and further orders" ಎಂದು ಹೇಳಿ ಅವರು ಅವರಿಗೆ ಕೊಡುತ್ತಾರೆ. He is the accused in this case. ಇವನೇ ಎಲ್ಲರಿಗೂ ಪಾಲು ಕೊಟ್ಟಿರುವ ಕಳ್ಳ. Range Forest Officer ಅದರ ಜೊತೆಗೆ Judicial Magistrate ಗೆ 20ನೇ ತಾರೀಖಿಗೆ ಒಂದು ಪತ್ರ ಬರೆಯುತ್ತಾರೆ. ಏನೆಂದರೆ, I have to report that I seized the following property on 20.3.2010 in connection with the forest offence committed by the person named below as per FIR No.27/2009-10, ಎಂದು ಹೇಳಿ, the properties seized is approximately 5 lakh metric tonne of iron ore. Value of the iron ore seized is

approximately 150 crores" ಎಂದು ಹೇಳಿ ಅವರಿಗೆ the name of the accused is, ಮಹೇಶ್ ಬಿಳಿಯಾರ್ ಎಂದು ಹೇಳಿ Court ಗೆ Range Forest Officer application submit ಮಾಡುತ್ತಾರೆ. ಅದರ ಜೊತೆಗೆ ಮಹಜರ್ ಕೂಡ ಕೊಡುತ್ತಾರೆ. Range Forest Officer Port Conservatorಗೆ ಇನ್ನೊಂದು ಪತ್ರ ಬರೆದು, ನೀವು ಅದನ್ನು ಹುಷಾರಾಗಿ ನೋಡಿಕೊಳ್ಳಬೇಕು, ಮಳೆ ಬರುತ್ತದೆ, ಹಾನಿಯಾಗುವ ಸಾಧ್ಯತೆ ಇರುತ್ತದೆ, ಅದರಿಂದ ತೊಂದರೆಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಅದನ್ನೂ ಕೂಡ ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ಎಲ್ಲವನ್ನೂ writing ನಲ್ಲಿಯೇ ಮಾಡಿರುತ್ತಾರೆ. Adani Enterprises Pvt. Ltd., ನವರಿಗೆ Port Conservator ರವರು ಒಂದು ಪತ್ರ ಬರೆಯುತ್ತಾರೆ. ಯಾರೆಂದರೆ, export company ಯವರಿಗೆ ಪತ್ರ ಬರೆಯುತ್ತಾರೆ. ಯಾರು ಕಳ್ಳರು ಈ ಕಂಪನಿಯವರೆಲ್ಲ illegal mining ನಲ್ಲಿ ಬಂದಂಥ ಅದಿರನ್ನು Port ನಲ್ಲಿ ರಾಶಿ ಮಾಡಿಕೊಂಡಿದ್ದರು. ಆ ನಾಲ್ಕು ಕಂಪನಿಗಳಿಗೆ ಅಂದರೆ, Adani Enterprises Limited, Salgaonkar Mining, Sri.Mallikarjuna, Rajmahal Silks ಇವರಿಗೆ ಏನೆಂದು ಪತ್ರ ಬರೆಯುತ್ತಾರೆ ಎಂದರೆ, "please find enclosed herewith self-explanatory letters 1 to 5 received from the Range Forest Officer, Ankola and order passed by the Hon'ble Civil Judge(Jr.Dn.) JMFC, Ankola, Your are directed to follow the Hon'ble court order in toto failing to company, you will be wholly held responsible which may please be noted. ಆಮೇಲೆ Port Conservator ರವರಿಗೆ Range Forest Officer ರವರು ಸಂಬಂಧಪಟ್ಟ documents ಎಲ್ಲವನ್ನೂ ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಲ್ಲಾ ಸಂಬಂಧಪಟ್ಟ documents ಎಲ್ಲವನ್ನೂ ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಲ್ಲಾ ಅವೆಲ್ಲವನ್ನು ಕೊಡಬೇಕೆಂದು ಇನ್ನೊಂದು ಪತ್ರ ಬರೆಯುತ್ತಾರೆ. ಅವರು ಕೇಳುವ ಆ documents ಯಾವುವು ಎಂದರೆ, lease

particulars, traders particulars, permit particularas with great nature, quantity of iron ore, transport invoice copies, double weight charges, copy of port manual, the particulars of the origin of the iron ore ಇದು ಎಲ್ಲಿಂದ ಬಂತು? ಆ iron ore ನ origin ಏನು? ಅದು ಎಲ್ಲಿಂದ extract ಆಯಿತು? ಯಾವ್ಯಾವ ಕಡೆಯಿಂದ transport ಆಗಿ ಎಲ್ಲಿಂದ ಬಂತು? ಅದೆಲ್ಲವನ್ನೂ ಕೊಡಬೇಕೆಂದು ಅವರು ಕೇಳುತ್ತಾರೆ. ದಿನಾಂಕ: 6.4.2010ರಂದು ಎಂ.ಜಿ. ಹಿತ್ತಲಮಕ್ಕಿ ಎನ್ನುವವರಿಗೆ DCF, karwar Division, Mr.Gokul ಅವರು investigation ಅನ್ನು RFO ರಿಂದ ACF ಗೆ ವರ್ಗಾವಣೆ ಮಾಡುತ್ತಾರೆ. ಅವರಿಗೆ ಒಂದು ಪತ್ರ ಬರೆದು, "you are hereby directed to take a further investigation of FIR No.17/2009-10 dated 15.3.2010 registered by the Range Forest Officer, Ankola u/s 2 sub Clause 7 and 5, Rule 62, and 80 of Karnataka Forest Act, 1963 and 143, 162 of Karnataka Forest Ruels ಎಂದು ಹೇಳಿ, the same shall be investigated as per law and speedy charge sheet. ಗೋಕುಲ್ ಎನ್ನುವವರು-ನೀವು investigation ಮಾಡಿ charge sheet ಹಾಕಿ ಎಂದು Assistant Conservator of Forest ಆದ ಹಿತ್ತಲಮಕ್ಕಯವರಿಗೆ ಕೊಡುತ್ತಾರೆ, Investigation Officer ಹಿತ್ತಲಮಕ್ಕಿಯವರು 8 ಲಕ್ಷದ ಬಗ್ಗೆ ಇವರು ಒಂದು report ಕೊಡುತ್ತಾರೆ, 8,05,991 metric tonne iron ore seize ಮಾಡಿದ್ದಾರೆ. ಇದೆಲ್ಲ ಆದಮೇಲೆ ಕರಾವಳಿ ಮುಂಜಾವು ಎನ್ನುವ ಪತ್ರಿಕೆಯಲ್ಲಿ "seize ಮಾಡಿದ್ದ iron ore ಅನ್ನು ಹೊರದೇಶಕ್ಕೆ ಕದ್ದು ಸಾಗಿಸಿದ್ದಾರೆ" ಎಂದು report ಬರುತ್ತದೆ 8,05,991 metric tonne iron ore seize ಮಾಡಿ ಮಹಜರು ಮಾಡಿ Court ಗೆ ಕೊಟ್ಟು ಇಟ್ಟಿದ್ದರು, ಅದು ಪತ್ರಿಕೆಯಲ್ಲಿ ಬಂದ ಮೇಲೆ, ಅದು ಗೊತ್ತಾದ ಮೇಲೆ seize ಆದ ಸ್ಥಳಕ್ಕೆ ಅಧಿಕಾರಿಗಳು ಜೂನ್ 2ನೇ ತಾರೀಖು ಹೋಗಿ ನೋಡಿದಾಗ ಅಲ್ಲಿ ಕೇವಲ 2ಲಕ್ಷ metric tonne ಕಬ್ಬಿಣದ ಅದಿರು ಮಾತ್ರ ಇರುತ್ತದೆ. ಸುಮಾರು 12 ಗಂಟೆಗೆ

ಬೇಲೇಕೇರಿ ಬಂದರು ಪ್ರದೇಶದಲ್ಲಿ ಕಬ್ಬಿಣದ ಅದಿರು ದಾಸ್ತಾನು ಮಾಡಿದ ಪ್ರದೇಶವನ್ನು ಪರಿಶೀಲಿಸಲಾಗಿ ಬೇಲೇಕೇರಿ ಬಂದರು ಪ್ರದೇಶದಲ್ಲಿ ದಾಸ್ತಾನಿದ್ದ ಬಹಳಷ್ಟು ಕಬ್ಬಿಣದ ಅದಿರು ಖಾಲಿಯಾಗಿದ್ದುದು ಕಂಡುಬಂದಿತು. ಸ್ಥಳದಲ್ಲಿದ್ದ ಜಪ್ತು ಆದ ಕಬ್ಬಿಣದ ಅದಿರನ್ನು ಪರಿಶೀಲಿಸಲಾಗಿ ಅಂದಾಜು 2 ಲಕ್ಷ metric tonne ಹಾಲಿ ದಾಸ್ತಾನು ಇರಬಹುದೆಂದು ಅಂದಾಜಿಸಲಾಗಿದೆ ಎಂದು ತಿಳಿಸಿದ್ದಾರೆ. ಅಂದರೆ 6 ಲಕ್ಷಕ್ಕೂ ಹೆಚ್ಚು ಕಬ್ಬಿಣದ ಅದಿರು ಆವತ್ತು ಇರುವುದಿಲ್ಲ. In the meanwhile ಏನಾಗಿದೆ ಎಂದರೆ High Courtನಲ್ಲಿ ಒಬ್ಬರು case ಹಾಕಿದರು. Write petition No.15742/2010 PGS Overseas Ltd., and others ಈ case ನಲ್ಲಿ ಅರ್ಜಿದಾರರು, ಇದು ನಮಗೆ ಸೇರಿದ್ದು, ನಮ್ಮ ಹತ್ತಿರ documents ಇದೆ, ಅದನ್ನು ನಮಗೆ ಕೊಡಿ ಎಂದು ಕೇಳುತ್ತಾರೆ. High Court ನಲ್ಲಿ ಇವರ ಯಾವ documents ಇಲ್ಲ, ಇವರಿಗೆ ಪರಿಹಾರವೂ ಸಿಗಲಿಲ್ಲ. ಆದರೆ, ಇವರು High court ನಲ್ಲಿ 3 ಲಕ್ಷಕ್ಕೆ ಮಾತ್ರ claim ಮಾಡುತ್ತಾರೆ. ಆದರೆ, seize ಆಗಿರುವುದು 8,05,991 metric tonne iron ore ಅಂದರೆ, for the remaining 5 lakh metric tonne of iron ore, no claimants ಅದಕ್ಕೆ ವಾರಸುದಾರರು ಇಲ್ಲ. That means to say, ಆ 5 ಲಕ್ಷ metric tonne irone ore ಯಾವುದೇ permit ಇಲ್ಲದೆ, ಯಾವುದೇ valid document ಇಲ್ಲದೆ, Forest Department, Mines and Geology Department ನಿಂದ permission ಇಲ್ಲದೆ ಯಾರೋ ಕಳ್ಳರು, ಲೂಟಿ ಹೊಡಿದಿರುವ ಕಳ್ಳರು 5 ಲಕ್ಷ metric tonne iron ore ಅನ್ನು ಅಲ್ಲಿಗೆ ಕಳುಹಿಸಿದ್ದಾರೆ. 1 metric tonne ಗೆ ಕನಿಷ್ಠ 3 dollar ಎಂದರೆ 5 ಲಕ್ಷ metric tonne ಗೆ 250 ಕೋಟಿ ರೂಪಾಯಿಗಳಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. Document ಸಿಕ್ಕಿರುವುದು invalid documents, bogus documents, ಇದೆಲ್ಲ illegal documents ಸಿಕ್ಕಿರುವುದು 40 ಮೂಟೆ. ಆ 40 ಮೂಟೆ documents ಅನ್ನು ಅಂದಾಜು ಮಾಡಿದರೆ 35 ಲಕ್ಷ metric tonne ಗೂ ಜಾಸ್ತಿ ಹೋಗುತ್ತದೆ. It

may go up to 50 lakhs ಎಂದು ಲೋಕಾಯುಕ್ತರು ಹೇಳಿದ್ದಾರೆ. Documents ಸಹಿತ ಇದು prove ಆಗಿದೆ. This is not mere allegation. These are all facts. Admitted facts need not be proved. That is the basic principle under the Indian Evidence Act. Admitted facts need not be proved. In addition to this CM ರವರು ನಿನ್ನೆ upper House ನಲ್ಲಿ ಉತ್ತರ ಕೊಡುವಾಗ ಒಪ್ಪಿಕೊಂಡಿದ್ದಾರೆ. ಎಲ್ಲಾ ಸತ್ಯ, ಇದು ನಡೆದಿರುವುದೆಲ್ಲಾ ಸತ್ಯ, ಕಳ್ಳ ಗಣಿಗಾರಿಕೆ ನಡೆಯುತ್ತಿರುವುದು ನಿಜ, it has been done by mining mafia. ಇದರಿಂದ ಕೋಟಿಗಟ್ಟಲೆ, ಸಾವಿರಾರು ಕೋಟಿಗಟ್ಟಲೆ ರಾಜ್ಯದ ಬಿಕ್ಕಸಕ್ಕೆ ನಷ್ಟವಾಗುತ್ತಿದೆ ಎಂದು CM ರವರು ಒಪ್ಪಿಕೊಂಡಿದ್ದಾರೆ. I don't think ಇದನ್ನು prove ಮಾಡಬೇಕಾದ ಅಗತ್ಯವಿಲ್ಲ. Since Chief Minister made an admission on the floor of the Upper House and there are also sufficient documents to show that illegal minig is going on and ಇದರಲ್ಲಿ ದೊಡ್ಡ ದೊಡ್ಡ ಕಳ್ಳರು ಇದ್ದಾರೆಂದು ಹೇಳಿದರು. ಲೋಕಾಯುಕ್ತರು ಇನ್ನೊಂದು ಕಡೆ ಹೇಳಿದ್ದಾರೆ. ಪಾಲೇಮಾರ್ ಒಬ್ಬರೇ ಅಲ್ಲ, ಇನ್ನೂ ದೊಡ್ಡ ದೊಡ್ಡ ಕುಳಗಳಿವೆ ಎಂದು ಹೇಳಿದ್ದಾರೆ. ಪಾಲೇಮಾರ್‌ರವರು ಅಲ್ಲಿ ಎಲ್ಲೋ ಯಾರಿಗೋ, ಯಾವುದೇ permission ಇಲ್ಲದೆ, ಕೇಂದ್ರ ಸರ್ಕಾರದ permission ಇಲ್ಲದೆ, Pollution Control Board permission ಇಲ್ಲದೆ ಕೊಡುವುದಕ್ಕೆ ಹೋಗಿದ್ದ ಬಗ್ಗೆ Deccan Herald ಪತ್ರಿಕೆಯಲ್ಲಿ ಬಂದಿದೆ. 'That has also appeared in Belekere Port closure' ಇದು ಕೂಡ ಬಂದಿದೆ. ಏನೂ ಇಲ್ಲದೆ ಪಾಲೇಮಾರ್ ರವರು ಅಲ್ಲಿರುವುದಕ್ಕಿಂತ ಹೆಚ್ಚಿಗೆ ಕೊಟ್ಟಿದ್ದಾರೆ. ಆದ್ದರಿಂದ, ಲೋಕಾಯುಕ್ತರು, it is not Palemar alone ಎಂದು ಹೇಳುತ್ತಾರೆ. ದೊಡ್ಡ ದೊಡ್ಡ ಕುಳಗಳು ಯಡಿಯೂರಪ್ಪನವರ ಮಂತ್ರಿಮಂಡಲದ್ದಲ್ಲಿದ್ದಾರೆಂದು ಹೇಳುತ್ತಾರೆ. Since Yeddyurappa has admitted, ಕರ್ನಾಟಕದ ಸಂಪತ್ತನ್ನು ಕದ್ದು ಹೊರದೇಶಕ್ಕೆ

ರವಾನೆಯಾಗುತ್ತಿದೆ, ನಮ್ಮ ಹತ್ತಿರ ಕಳ್ಳರಿದ್ದಾರೆ ಎಂದು ಹೇಳಿದ ಮೇಲೆ ಆ ಕಳ್ಳರು ಯಾರು ಎನ್ನುವುದನ್ನು ಹೇಳಬೇಕು. ಕಳ್ಳರು ಯಾರು? ಲೂಟಿ ಹೊಡೆಯುವವರು ಯಾರು? ಇದರಲ್ಲಿ ಯಾರ್‍ಯಾರು ಸೇರಿದ್ದಾರೆ ಎನ್ನುವುದನ್ನು ಉತ್ತರ ಕೊಡುವಾಗ ಹೇಳಬೇಕು. ಅವರ ಮಂತ್ರಿಮಂಡಲದಲ್ಲಿ ಅವರಿದ್ದರೆ ಅವರನ್ನು ಕೂಡಲೆ dismiss ಮಾಡುವ ಕೆಲಸ ಮಾಡಬೇಕು. ಇದನ್ನು ಲೋಕಾಯುಕ್ತರು ಹೇಳಿದ್ದಾರೆ, ಯಡಿಯೂರಪ್ಪನವರೂ ಹೇಳಿದ್ದಾರೆ. ಇಷ್ಟೆಲ್ಲಾ ಆದಮೇಲೂ ಯಡಿಯೂರಪ್ಪನವರ ಮಾರ್ಚ್ ತಿಂಗಳಿನಲ್ಲಿ ಹೇಳಿದ್ದರೆ. ಒಂದು ಕಡೆ ಒಪ್ಪಿಕೊಳ್ಳುತ್ತೀರಿ. ಇನ್ನೊಂದು ಕಡೆ ಏನು ಹೇಳಿದ್ದೀರೆಂದರೆ, "ರಾಜ್ಯದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ಇಲ್ಲ - ಸಿ.ಎಂ." ರಾಜ್ಯದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುತ್ತಿಲ್ಲವೆಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ. ಜಿಲ್ಲೆಯ ಜಿಂದಾಲ್ ವಿಮಾನ ನಿಲ್ದಾಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿದರು ಎಂದು ಪತ್ರಿಕೆಯಲ್ಲಿ ಬಂದಿದೆ. This is not my statement. It is the statement of Hon'ble Chief Minister Mr.Yadiyurappa. ನಿನ್ನೆ ನಾವು ಈ ವಿಷಯ ಪ್ರಸ್ತಾಪಿಸಿದ ಮೇಲೆ ಲೋಕಾಯುಕ್ತರು ಎಲ್ಲಾ ಬಯಲಿಗೆ ತಂದ ಮೇಲೆ ಈಗ ಇದು ನಡೆಯುತ್ತಿರುವುದು ನಿಜ ಎಂದು ಹೇಳುತ್ತಾರೆ. ಕಳೆದ ಎರಡು ವರ್ಷ ಅದಕ್ಕಿಂತ ಇಪ್ಪತ್ತು ತಿಂಗಳು ಇವರೇ ಹಣಕಾಸಿನ ಮಂತ್ರಿಗಳಾಗಿದ್ದರು, ಉಪ ಮುಖ್ಯಮಂತ್ರಿಗಳಾಗಿದ್ದರು. ಈಗ ಎರಡು ವರ್ಷದಿಂದ ಮುಖ್ಯಮಂತ್ರಿಗಳಾಗಿದ್ದಾರೆ. ಮಾರ್ಚ್‌ವರೆಗೆ ನಿಮ್ಮ ಗಮನಕ್ಕೆ ಬರಲಿಲ್ಲವೆ ಸ್ವಾಮಿ? ಈ ರಾಜ್ಯದ ಜನತೆಗೆ ಕೋಟ್ಯಾಂತರ ರೂಪಾಯಿ ಲೂಟಿ ಹೊಡೆಯುತ್ತಾರೆಂದು ಒಂದು ಸಾರಿ ಹೇಳುತ್ತೀರಿ, ಇನ್ನೊಂದು ಸಾರಿ ಗಣಿಗಾರಿಕೆ ನಡೆಯುತ್ತಿಲ್ಲವೆಂದು ಹೇಳುತ್ತೀರಿ, ನಿಮ್ಮ ಮಾತಿನ ಬಗ್ಗೆ ಯಾರಿಗಾದರೂ ವಿಶ್ವಾಸ ಬರುತ್ತದೆಯೆ ಮಾನ್ಯ ಮುಖ್ಯಮಂತ್ರಿಗಳೆ? ಇಡೀ ರಾಜ್ಯದ ಜನರನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಹೇಳಿಕೆಯನ್ನು ನೀವು ಮಾಡಿದಿರಿ. Does it not amount to breach of privilege? ಇದು ಈ ರಾಜ್ಯದ ಜನರಿಗೆ ಮಾಡತಕ್ಕಂಥ ದ್ರೋಹ ಅಲ್ಲವೇ? ಈ ರಾಜ್ಯಕ್ಕೆ ಮಾಡತಕ್ಕಂಥ ದ್ರೋಹ ಅಲ್ಲವೇ? Chief Minister holding the portfolio says illegal mining is going on, where export is taking

place illegally. ಅವರೇ ಹೀಗೆ ಹೇಳಿದ ಮೇಲೆ why all these years Hon'ble Chief Minister suppressed the facts. Why has he suppressed the facts? ಕಾರಣ ಏನೆಂದರೆ, ಇವರಿಗೆ ಗೊತ್ತಿದ್ದೆ ನಡೆಯುತ್ತಿದೆ. With his knowledge only it is going on. Not that ಇವರಿಗೆ knowledge ಇಲ್ಲದೆ ನಡೆದಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. It is going on with his knowledge only and he is aware of it. The very fact that he has not come out with the truth, ರಾಜ್ಯದ ಜನರಿಗೆ ಸತ್ಯ ಹೇಳದೇ ಇರುವುದರಿಂದ, ಮುಚ್ಚಿ ಹಾಕಿರುವುದರಿಂದ ಇದು ರಾಜ್ಯಕ್ಕೆ ಮಾಡತಕ್ಕಂಥ ದ್ರೋಹ ಅಲ್ಲ ಜನರಿಗೂ ಕೂಡ ಮಾಡತಕ್ಕಂಥ ದ್ರೋಹ. ಅದಕ್ಕೋಸ್ಕರ ಮಾನ್ಯ ಯಡಿಯೂರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಅವರೇ ಇದಕ್ಕೆ ನೇರವಾಗಿ ಹೊಣೆಗಾರರು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿ ವೀರಾವೇಶದಿಂದ ಉತ್ತರ ಕೊಡುವಾಗ ಮಾತನಾಡಿದ್ದಾರೆ. ಕಳ್ಳರು ಯಾರೇ ಆಗಲಿ, ಎಷ್ಟೇ ದೊಡ್ಡವರಿರಲಿ, ಅವರಿಗೆ ಬಲಿ ಹಾಕುತ್ತೇನೆ, ಅವರನ್ನು ಬಲಿ ಹಾಕದೇ ಬಿಡುವುದಿಲ್ಲ, ಬಲಿ ಹಾಕದೇ ಇದ್ದರೆ ನಾನು ಈ ಕುರ್ಚಿಯಲ್ಲಿ ಉಳಿಯುವುದಿಲ್ಲ ಎಂದು ಹೇಳಿದ್ದಾರೆ. ಎರಡು ವರ್ಷಗಳಿಂದ ನಿಮಗೆ ಗೊತ್ತಿತ್ತಲ್ಲ ಏಕೆ ಸುಮ್ಮನಿದ್ದೀರಿ? ನೀವೇ ಮುಖ್ಯಮಂತ್ರಿಗಳಾಗಿದ್ದೀರಿ, ಬೇರೆ ಯಾರೂ ಮುಖ್ಯಮಂತ್ರಿಗಳಾಗಿರಲಿಲ್ಲ. ಇವರೇ ಮುಖ್ಯಮಂತ್ರಿಗಳಾಗಿದ್ದರು. ಇದು ಹೇಗೆ ನೋಡಿ, ಇವತ್ತು accused ಜಾಗದಲ್ಲಿ ಮಾನ್ಯ ಯಡಿಯೂರಪ್ಪನವರು ನಿಂತುಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ನನ್ನ ನೋವಿನ ಸಂಗತಿ. ಅಪರಾಧಿ ಸ್ಥಾನದಲ್ಲಿ ಇದ್ದೀರಲ್ಲಾ ಮುಖ್ಯಮಂತ್ರಿಗಳೇ ಈ ತರಹ ಆಗಬಾರದು ಎನ್ನುವ ನೋವು ನಮಗೆ, ಏಕೆ ನೀವು ಇಷ್ಟೊಂದು ವೀಕ್ ಆಗಿಬಿಟ್ಟಿರಿ?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ದಯಮಾಡಿ ನಮ್ಮ ಸದಸ್ಯರು ಗಮನಿಸಬೇಕು. ಸಿದ್ದರಾಮಯ್ಯನವರು ಈ ರಾಜ್ಯದ ಉಪಮುಖ್ಯಮಂತ್ರಿಗಳಾಗಿದ್ದರು. ಸನ್ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು. ನೀವು ಇದ್ದದ್ದು 2004-05 ರಲ್ಲಿ 52,39,518 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು ನಿಮ್ಮ ಕಾಲದಲ್ಲಿ ಕಾನೂನು ಬಾಹಿರವಾಗಿ

ಹೋಗಿದೆ ಸ್ವಾಮಿ. 2004-05ರಲ್ಲಿ permitted 64,51,65, exported 1,16,91,183, difference 52,39,518 ಮೆಟ್ರಿಕ್ ಟನ್. ನಾನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಏನು ಹೇಳುತ್ತೇನೆಂದರೆ, 2003-04 ರಿಂದ 2009-10 ರವರೆಗೆ ಈ ದಿನದವರೆಗೆ ಈ ದಂಧೆ ನಿರಂತರವಾಗಿ ನಡೆದಿದೆ. ಮಾಜಿ ಉಪಮುಖ್ಯಮಂತ್ರಿಗಳು ಹಣಕಾಸಿನ ಸಚಿವರಾಗಿದ್ದ ನಿಮ್ಮ ಕಾಲದಲ್ಲಿ ನಡೆದಿದೆ. ನಾನೇನು ಮುಚ್ಚಿಡುವುದಕ್ಕೆ ಹೊರಟಿಲ್ಲ. ನನಗೂ ನಿಮಗೂ ವ್ಯತ್ಯಾಸ ಏನೆಂದರೆ, ಈ ರಾಜ್ಯದಲ್ಲಿ ಕಬ್ಬಿಣದ ಅದಿರಿನ ದಂಧೆ ಏನು ನಡೆಯುತ್ತಿದೆ, ಲೂಟಿ ಏನು ನಡೆಯುತ್ತಿದೆ, ಇದಕ್ಕೆ ಕಡಿವಾಣ ಹಾಕಲಿಕ್ಕೆ ನಾನೊಂದು ಸಲಹೆ ಕೊಟ್ಟೆ, ಮಾನ್ಯ ಜಯಚಂದ್ರರವರೆ, ಎರಡು ದಿನ ಅಧಿವೇಶನ ಮುಂದಕ್ಕೆ ಹಾಕಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟ್ಟಿಯಾಗಿ ಕೇವಲ ನನ್ನ ರಾಜ್ಯವಲ್ಲ, ದೇಶದ ಎಲ್ಲಾ ರಾಜ್ಯಗಳ ಅಂಕಿಅಂಶಗಳನ್ನು ನಾನು ತರಿಸುತ್ತಿದ್ದೇನೆ. ಇದು ನಡೆಯುತ್ತಿದೆ ನಮ್ಮ ಸಂಪತ್ತು ಹೊರದೇಶಕ್ಕೆ ಕಳುಹಿಸಿ ಅದರಿಂದ ಬದುಕುವಂಥ ಸ್ಥಿತಿ ನಮ್ಮ ರಾಜ್ಯ ಮತ್ತು ದೇಶಕ್ಕೆ ಬಂದಿಲ್ಲ ಸ್ವಾಮಿ, ಈ export ಅನ್ನು ಸಂಪೂರ್ಣವಾಗಿ ನಿಲ್ಲಿಸಿ ಎಂದು ಹೇಳುವುದಕ್ಕೆ ನೀವು ನಿಯೋಗದಲ್ಲಿ ಬರುವುದಕ್ಕೆ ಸಿದ್ಧವಾದರೆ, ನಾನು ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ. ಪಕ್ಷಾತೀತವಾಗಿ ಕಾಂಗ್ರೆಸ್, ಜೆಡಿಎಸ್, ಏನು ಬೇಡ, ಕನ್ನಡ ನಾಡಿನ ಆರು ಕೋಟಿ ಜನರ ಉಳಿವಿಗಾಗಿ ಲಕ್ಷಾಂತರ ಕೋಟಿ, ಸಾವಿರಾರು ಕೋಟಿ ಎಂದು ನಾನು ಹೇಳುವುದಿಲ್ಲ. ಕಳೆದ ಹತ್ತಾರು ವರ್ಷಗಳಿಂದ.. ಒಂದು ನಿಮಿಷ ಸಿದ್ಧರಾಮಣ್ಣನವರೆ, ದಯಮಾಡಿ ತಪ್ಪ ತಿಳಿದುಕೊಳ್ಳಬೇಡಿ ನಾನು ಮತ್ತೆ ನಿಲ್ಲುವುದೇ ಇಲ್ಲ, ಮಹದೇವಪ್ಪನವರೇ ನಾನೊಬ್ಬ ಮುಖ್ಯಮಂತ್ರಿಯಾಗಿ ಇಲ್ಲಿ ಎದ್ದು ನಿಂತು ಮಾತನಾಡುತ್ತಿದ್ದೇನೆ. ಅವರು ಆಗಲೇ ಹೇಳಿದಿರಲ್ಲಾ ಕೇಂದ್ರದವರು ಬರೆದಿರುವ ಆ ಎಲ್ಲಾ ಪತ್ರಗಳ ಕಾಪಿ ನಿಮಗೆ ಕಳುಹಿಸಿ ಕೊಡುತ್ತೇನೆ. ಟೋಲ್‌ಗಳನ್ನು ಹಾಕುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ: ಆಗಲೇ ಇಲ್ಲ ಎಂದಿರಲ್ಲಾ?

ಶ್ರೀ ಬಿ ಎಸ್ ಯಡಿಯೂರಪ್ಪ: ಈಗ ಕಾಪಿ ಸಿಕ್ಕು, ಇದು ಒಳ್ಳೆಯ ಕತೆಯಾಯಿತಲ್ಲಾ, ಎಲ್ಲಾ ಕೈಯಲ್ಲಿ ಇಟ್ಟುಕೊಳ್ಳುವುದಕ್ಕೆ ನಾನು ಬೃಹಸ್ಪತಿನೆ? ನೀವು ಪೇಪರ್ ಓದಿದ ಮೇಲೆ ನೋಡಿದ್ದೇನೆ ಕೊಡುತ್ತೇನೆ. ನಾನು ಏನು

ಹೇಳುತ್ತೇನೆಂದರೆ, ನಿಮ್ಮ ಬುಡದಲ್ಲಿ ಏನೇನಾಗಿತ್ತು ಎನ್ನುವುದನ್ನು ದಾಖಲೆಗಳನ್ನು ವಾಪಸ್ ನೋಡಿ ಸ್ವಾಮಿ. ನೋಡಿ ಆಮೇಲೆ ಮಾತನಾಡಿ. ನೀವು ಗಾಜಿನ ಮನೆಯಲ್ಲಿ ನಿಂತುಕೊಂಡು ಕಲ್ಲು ಹೊಡೆಯುತ್ತಿದ್ದೀರಾ, ಪರಿಸ್ಥಿತಿಯ ಅರಿವು ಇಲ್ಲದೇ ಮಾತನಾಡುತ್ತೀದ್ದೀರಾ?

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸಿಬಿಐ ಗೆ ರೆಫರ್ ಮಾಡಿಬಿಡಿ ಸ್ವಾಮಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ.

ಶ್ರೀ ಬಿ ಎಸ್ ಯಡಿಯೂರಪ್ಪ: ನಾನೇನು ತಪ್ಪು ಮಾತನಾಡಿದೆ, ಒಂದು ನಿಮಿಷ ನಾನು ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.. ಮಾನ್ಯ ಮುಖ್ಯಮಂತ್ರಿಗಳು ನಿಂತಾಗ ಅಷ್ಟಾದರೂ ಗೌರವ ಕೊಡುವುದು ಬೇಡವೆ?.. ನಾನೇನಾದರೂ ಸಿದ್ದರಾಮಣ್ಣನ ಮೇಲೆ ಆರೋಪ ಮಾಡಿದ್ದರೆ ಅಥವಾ ಹಿಂದಿನ ಯಾವುದೇ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡಿದ್ದರೆ ನೀವು ಬೆಟ್ ಮಾಡಿ ತೋರಿಸಿ. ನಾನು ಬೆಟ್ ಮಾಡಿ ತೋರಿಸಿಲ್ಲ. ಏಕೆಂದರೆ, ನಾಲ್ಕು ಬೆಟ್ಟುಗಳು ನನ್ನನ್ನು ನೊಡುತ್ತಿರುತ್ತವೆ. ಈ ಜಾಗದಲ್ಲಿ ಕುಳಿತು ಏನು ಮಾತನಾಡಬೇಕೆಂಬ ಅರಿವು ನನಗಿದೆ. ನಾನು ಕಳೆದ 4-5 ದಿವಸದಿಂದ ಸರ್ಕಸ್ ಮಾಡಿ ಲೋಕಾಯುಕ್ತ ಕಛೇರಿಯಲ್ಲಿದ್ದಂಥ ಸೀಜ್ ಮಾಡಿಕೊಂಡಂಥ ಎಲ್ಲಾ ಪುಸ್ತಕಗಳನ್ನು ತೆಗೆದುಕೊಂಡು ದಾಖಲೆಗಳನ್ನು ನೋಡುವ ಪ್ರಯತ್ನ ಮಾಡಿದ್ದೇನೆ. ನನ್ನ ಹತ್ತಿರ ಸಿಕ್ಕಿದ ದಾಖಲೆ ಪ್ರಕಾರ 2004-05 ರಲ್ಲಿ 52,39,518 ಮೆಟ್ರಿಕ್ ಟನ್ difference ಆಗಿದೆ. ಆ ಕಬ್ಬಿಣದ ಅದಿರು ಬಿಲ್ ಇಲ್ಲದೇ ಹೋಗಿದೆ. ಅಕ್ರಮವಾಗಿ ಹೋಗಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇಲ್ಲಿರತಕ್ಕಂಥ ಮಾನ್ಯ ಗೌರವಾನ್ವಿತ ಸದಸ್ಯರು ಈ ಮನೆಯಲ್ಲಿ ಚರ್ಚೆ ಬೇಡ ಎಂದರೆ, ಬನ್ನಿ ಪ್ರತಿ ಪಕ್ಷದ ಸದಸ್ಯರ ಸಭೆಯನ್ನು ಕರೆಯುತ್ತೇನೆ. ಎಲ್ಲಾ ದಾಖಲೆಯನ್ನು ನಿಮ್ಮ ಮುಂದೆ ಇಡುತ್ತೇನೆ. ಇದನ್ನು ಸರಿ ಮಾಡುವುದಕ್ಕೆ ಏನು ಮಾಡಬೇಕೆಂದು ಸಲಹೆ ಕೊಡಿ. I am ready.

ಶ್ರೀ ಸಿದ್ದರಾಮಯ್ಯ: ಉತ್ತರ ಹೇಳುವಾಗ ಹೇಳಿ ಸ್ವಾಮಿ. ಆಗ ಎಲ್ಲಾ ಕೊಡಿ.

ಶ್ರೀ ಬಿ ಎಸ್ ಯಡಿಯೂರಪ್ಪ: ಆಗಬಹುದು.

ಶ್ರೀ ಶ್ರೀನಿವಾಸ ಪ್ರಸಾದ್: ಅವರ ಕಾಲದಲ್ಲಿ ಅಕ್ರಮವಾಗಿ ಸಾಗಾಣಿಕೆಯಾಗಿದೆ ಎಂದರೆ ಅದನ್ನು ನೀವು ಮುಂದುವರಿಸುವುದರಲ್ಲಿ ತಪ್ಪೇನು ಇಲ್ಲವೆಂದು ಅರ್ಥವೆ?

ಶ್ರೀ ಬಿ ಎಸ್ ಯಡಿಯೂರಪ್ಪ: ಇಲ್ಲ ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ನೋಡಿ ನೀವು follow ಮಾಡಲಿಲ್ಲ.

(ಗೊಂದಲ)

You have not followed me. ಈ ದಂಧೆ ಕೊನೆಯಾಗಬೇಕು. ಪ್ರಧಾನಮಂತ್ರಿಗಳ ಹತ್ತಿರ ಹೋಗಬೇಕು. ಕರ್ನಾಟಕ ರಾಜ್ಯದ ಒಂದು ಟನ್ ಕಬ್ಬಿಣದ ಅದಿರು ಹೊರ ದೇಶಕ್ಕೆ export ಆಗಕೂಡದು. ಇಲ್ಲಿನ ಕಬ್ಬಿಣದ ಅದಿರು ಇಲ್ಲಿಯೇ ಉಪಯೋಗವಾಗಬೇಕು. That is my intension. I am not supporting this case. I am not supporting, ಇದು ಕೊನೆಯಾಗಬೇಕು, ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗಲೂ ಆಗಿದೆ, ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೂ ಆಗಿದೆ. ನನ್ನ ಕಾಲದಲ್ಲೂ ಆಗಿದೆ, ಬಿಗಿ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದರೆ export ಆಗುವುದನ್ನು ತಡೆಯುವುದು ಬಿಟ್ಟು ಬೇರೆ ಏನು ಮಾರ್ಗವಿಲ್ಲ. ನಮ್ಮ ಸಂಪತ್ತು ನಮಗೆ ಉಳಿಯಲಿ, value added ಇದಕ್ಕೆ ಮಾತ್ರ ಕೊಡುತ್ತೇನೆಂದು ಹೇಳಿದಂಥ ಯಾರಾದರೂ ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳೆಂದರೆ ಈ ಯಡಿಯೂರಪ್ಪ ಎಂದು ಎದೆ ತಟ್ಟಿಕೊಂಡು ಹೇಳುತ್ತೇನೆ. ಈ ನಾಡಿನ ಉಳಿವೆಗಾಗಿ ಮಾಡಿರುವ ಪ್ರಯತ್ನ ಯಡಿಯೂರಪ್ಪನದು. ಆದರೂ ಇದು ಮುಂದುವರೆದಿದೆ, ಇದನ್ನು ಕೊನೆ ಮಾಡುವುದಕ್ಕಾಗಿ ಕೇಂದ್ರಕ್ಕೆ ಹೋಗೋಣ ನಡೆಯಿರಿ. ಅಲ್ಲಿ ಚರ್ಚೆ ಮಾಡೋಣ. ನಾನೇನು ಪತ್ರ ಬರೆದಿದ್ದೇನೆ ಎಲ್ಲಾ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

12.10 ಪಿ.ಎಂ.

ಶ್ರೀ ಬಿ ಎಸ್ ಯಡಿಯೂರಪ್ಪ: ನಾನು ಮಾನ್ಯ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಅಂಕಿ-ಅಂಶಗಳನ್ನು ಹೇಳಿದರೆ ಅದನ್ನು ತಿಳಿದುಕೊಳ್ಳುವಂಥ ಸೌಜನ್ಯ ನಿಮಗೆ ಇಲ್ಲ. ನಿಮ್ಮ ಕಾಲದಲ್ಲಿಯೂ ಕೂಡ ಈ ದಂಧೆ ನಡೆಯುತ್ತಿತ್ತು ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಕೃಷ್ಣ ಬೈರೇಗೌಡರೆ ಕುಳಿತುಕೊಳ್ಳಿ

ಶ್ರೀ ರಮಾನಾಥ್ ರೈ: ದಂಧೆಯನ್ನು ನೀವುಗಳು ಮಾಡುತ್ತಿದ್ದೀರಿ. ನೀವು ಲೋಕಾಯುಕ್ತರು ರಾಜೀನಾಮೆ ಏಕೆ ಕೊಟ್ಟರೆಂಬ ಬಗ್ಗೆ ಸ್ವಲ್ಪ ಹೇಳಿ?

ಶ್ರೀ ಬಂಡೆಪ್ಪ ಕಾಶೆಂಪುರ್: ಮಾನ್ಯ ಅಧ್ಯಕ್ಷರೆ, 2004-05ರಲ್ಲಿ 52 ಲಕ್ಷ ಟನ್ ಅದಿರು ಅನಧಿಕೃತವಾಗಿ ಹೋಗಿದೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದು ಸವದಿ: ಹಿಂದೆ ಯಾವ ರೀತಿಯಾಗಿ ದಂಧೆ ಮಾಡಲಾಗುತ್ತಿತೆಂಬ ಬಗ್ಗೆ ಗೊತ್ತಾಗಲಿ ಎಂದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ನೀವೆಲ್ಲ ಈ ರೀತಿಯಾಗಿ ಎದ್ದು ಮಾತನಾಡಿದರೆ ಯಾವುದು ದಾಖಲೆಗೆ ಹೋಗಬಾರದೆಂದು ಹೇಳುತ್ತೇನಷ್ಟೆ, ಯಾವುದೂ ದಾಖಲೆಗೆ ಹೋಗುವುದಿಲ್ಲ ನೀವು ಏನು ಬೇಕಾದರು ಮಾತನಾಡಿಕೊಳ್ಳಿ. ಯಾವುದು ದಾಖಲೆಗೆ ತೆಗೆದುಕೊಳ್ಳಬೇಡಿ.

(ಮಾನ್ಯ ಸಭಾಧ್ಯಕ್ಷರ ಅನುಮತಿ ಮೇರೆಗೆ ದಾಖಲಿಸಿಕೊಂಡಿರುವುದಿಲ್ಲ.)

ಅಧ್ಯಕ್ಷರು: ದಾಖಲೆಗೆ ಹೋಗುವುದಿಲ್ಲವೆಂದು ಹೇಳಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಸಿದ್ದರಾಮಯ್ಯ ಸಾರ್ ಒಂದು ನಿಮಿಷ ನನಗೆ ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಹಿರಿಯರಿದ್ದಾರೆ. ಅವರು ಮಾತನಾಡುವಾಗ ನಾನಂತು ಮಧ್ಯದಲ್ಲಿ ಮಾತನಾಡಲಿಲ್ಲ. ಏಕೆಂದರೆ ಅವರ ಮೇಲೆ ನನಗೆ ಗೌರವ ಇದೆ. ನಾವು ಯುವಕರಿದ್ದೇವೆ ಮತ್ತೆ ಯುವ ಸದಸ್ಯರು ಸಹ ಆಗಿದ್ದೇವೆ. ಈ ಸದನದಲ್ಲಿ ನಾವು

ನೋಡಿದ ಹಾಗೆ ಇಲ್ಲಿ ಪದೇ ಪದೇ ಏನಾಗುತ್ತದೆಂದರೆ, ಏನೇ ವಿಚಾರ ಬಂದರೆ ಈ ರೀತಿಯಾಗಿ ಹಿಂದೆ ನಡೆದಿಲ್ಲವೆ ಎಂದು ಹೇಳುತ್ತಾರೆ. ನಮ್ಮ ಕಾನೂನಲ್ಲಿ ಸ್ಪಷ್ಟವಾಗಿದೆ.

(ಗೊಂದಲ)

ಶ್ರೀ ಎ ಎಸ್ ಪಾಟೀಲ್(ನಡಹಳ್ಳಿ): ಅವರು ಮಾತನಾಡುವುದಕ್ಕೆ ಬಿಡಿ. ನೀವೇನು ಗುಂಡಾಗಿರಿ ಮಾಡುತ್ತೀರಾ? ನೋಡಿದ್ದೇವೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ಅವರಿಗೆ ಮಾತನಾಡುವುದಕ್ಕೆ ನಾನು ಹೇಳಿದ್ದೇನೆ. ನೀವೇಕೆ ಮಧ್ಯದಲ್ಲಿ ಎದ್ದು ನಿಲ್ಲುತ್ತೀರಿ? ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ಕೃಷ್ಣ ಬೈರೇಗೌಡರೆ, ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಹಿರಿಯ ಸದಸ್ಯರಿದ್ದಾರೆ ಮತ್ತು ನಾವು ಯುವಕರಿದ್ದೇವೆ. ಹಿಂದೆ ನಡೆದಿಲ್ಲವೆ ಎಂದು ಪದೇ ಪದೆ ಹೇಳಲಾಗುತ್ತದೆ. ಈ ರೀತಿಯಾದರೆ ಮುಂದಿನ ಸಮಾಜಕ್ಕೆ ಏನು ಹೇಳಬೇಕು? Ignorance is no ನಮ್ಮ ಕಾನೂನಿನಲ್ಲಿ ಸ್ಪಷ್ಟವಾಗಿದೆ.

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ: ಮಾನ್ಯ ಕೃಷ್ಣ ಬೈರೇಗೌಡ ಗೌರವಾನ್ವಿತ ಅನುಭವಿ ಸದಸ್ಯರಿದ್ದಾರೆ. ಆದ್ದರಿಂದ, ಅವರು ಮಾತನಾಡುವುದಕ್ಕೆ ಬಿಡಿ. ಆನಂತರ ನಾನು ಉತ್ತರ ಕೊಡುತ್ತೇನೆ

ಅಧ್ಯಕ್ಷರು: ಅವರು ಮಾತನಾಡಲಿ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ತಮಗೂ ಸಹ ಕಾನೂನಿನ ಹಿನ್ನಲೆ ಇದೆ. ಕಾನೂನಿನಲ್ಲಿ ಸ್ಪಷ್ಟವಾಗಿದೆ. ಕಾನೂನಿನ ಅರಿವು ಇಲ್ಲದೆ ಹೋದರೆ, ಯಾವುದೇ ಸಂದಭದಲ್ಲಿಯೂ ಸಹ it doesn't become a defense. ಅದೇ ರೀತಿಯಲ್ಲಿ ಹಿಂದೆ ನಡೆದಿದೆ ಎಂದು ಹೇಳುವುದು ಇವತ್ತಿಗೆ ಮತ್ತು ಯಾವತ್ತಿಗೂ ಸಹ ಡಿಫೆನ್ಸ್ ಆಗುವುದಿಲ್ಲ. ಇವತ್ತಿನ ದಿವಸ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. 50 ವರ್ಷಗಳಲ್ಲಿ ಏನೇನೋ ನಡೆದು ಹೋಗಿದೆ ನಮಗೊಂದು ಅವಕಾಶ ಕೊಟ್ಟು

ನೋಡಿ ನಾವೆಲ್ಲ ಬದಲಾವಣೆ ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದಂಥವರು ಅವತ್ತು ನಡೆದಿರುವುದನ್ನು ಇವತ್ತು ಮತ್ತೆ ಮುಂದುವರಿಸಬೇಕಾದರೆ ಇವರು ಜನರಿಗೆ ಕೊಟ್ಟಿರುವ ಮಾತು ತಪ್ಪಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನಾಳೆದಿವಸ ಜನರೇ ತೀರ್ಮಾನ ಮಾಡುತ್ತಾರೆ. ಆದರೂ ಸಹ ಸರ್ಕಾರ ನಡೆಸತಕ್ಕಂಥವರು ಹಿಂದೆ ನಡೆದಿದೆ ಹೇಳುವುದು ಸರಿಯಲ್ಲ.. ಈ ದಂಧೆಯನ್ನು ಇವತ್ತು ನಿಲ್ಲಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದನ್ನು ನಾವೆಲ್ಲರೂ ಸಹ ಒಪ್ಪುತ್ತೇವೆ. ಆದರೂ ಸಹ ಎರಡು ವರ್ಷಗಳಿಂದ ನಡೆದಿರುವುದಕ್ಕೆ ಇವತ್ತು ಡಿಫೆನ್ಸ್ ಏನೆಂದರೆ, ಹಿಂದೆ ನಡೆದಿಲ್ಲವೆ ಎಂಬುದು ಆಗಿದೆ. ಸರ್ಕಾರಗಳು ಅಧಿಕಾರ ನಡೆಸುವಂಥ ಸಂದರ್ಭದಲ್ಲಿ ಗೊತ್ತಿದ್ದರೂ ಸಹ being cognizant of the offence, ಗೊತ್ತಿದ್ದು ಸಹ ಹಿಂದೆ ನಡೆದಿರುವುದನ್ನು ಮತ್ತೆ ನಡೆಸುವುದಕ್ಕೆ ಬಿಟ್ಟರೆ ಇದು ಬಹಳ ದೊಡ್ಡ ಅಪರಾಧವಾಗುವುದಿಲ್ಲವೇ? ಇದರ ಬಗ್ಗೆ ತಾವೇ ತೀರ್ಮಾನ ಮಾಡಿ. ಈ ಒಂದು ಹಿನ್ನಲೆಯಲ್ಲಿ ನಮ್ಮ ನಾಯಕರು ಒತ್ತಾಯ ಮಾಡುತ್ತಿದ್ದಾರೆ.

ಶ್ರೀ ಬಿ ಎಸ್ ಯಡಿಯೂರಪ್ಪ: ನೀವು ಏನು ಹೇಳಿದ್ದೀರಿ ಅದರ ಬಗ್ಗೆ ಹೇಳುತ್ತೇನೆ. ಒಂದು ನಿಮಿಷ ಕುಳಿತುಕೊಳ್ಳಿ. ನಿಮ್ಮ ಡಿಬೇಟ್ ಬಹಳ ಚೆನ್ನಾಗಿ ಆಗಬೇಕು. ಆದ್ದರಿಂದ, ನಾನು ಹೆಚ್ಚು ಕಾಲ ನಿಂತುಕೊಳ್ಳುವುದಿಲ್ಲ.

ಅಧ್ಯಕ್ಷರು: ಮಾನ್ಯ ಕೃಷ್ಣ ಬೈರೇಗೌಡರೆ, ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ ಎಸ್ ಯಡಿಯೂರಪ್ಪ: ಕೃಷ್ಣಬೈರೇಗೌಡರೆ, ಅಣ್ಣ ಕುಳಿತುಕೊಳ್ಳಪ್ಪ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ತಾವು ನಿಯಮಾವಳಿಗಳ ಬಗ್ಗೆ ಮಾತನಾಡುತ್ತೀರಿ. ನೀವು ಏನು ಬೇಕಾದರು ಮಾತನಾಡಿ. ಅವರು ಮಾತನಾಡುವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರ ಅನುಮತಿ ಮೇರೆಗೆ ದಾಖಲಿಸಿಕೊಂಡಿರುವುದಿಲ್ಲ)

ಅಧ್ಯಕ್ಷರು:- ಸಭಾನಾಯಕರು ಎದ್ದು ನಿಂತರು ಮಾತನಾಡುತ್ತೀರಿ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಬೈರೇಗೌಡರು ಹೇಳಿದ ಹಾಗೆ ನಾವು ಖಂಡಿತ ಡಿಫೆನ್ಸ್ ಮಾಡಿಕೊಳ್ಳುವುದಕ್ಕೆ ಹೋಗಿಲ್ಲ. ಅಥವಾ ಹಿಂದೆ ನಡೆದಿರುವುದು ಮತ್ತೆ ಮುಂದುವರಿಯಬೇಕೆಂದು ನಾನು ಹೇಳಿಲ್ಲ. ಇದು ಕೊನೆಯಾಗಬೇಕೆಂದು ನಾನು ಹೇಳುವುದಕ್ಕೆ ಹೊರಟಿದ್ದೇನೆ. ಇದಕ್ಕೆ ನೀವುಗಳು ಸಲಹೆ ಕೊಡಿ, ನೀವು ಹೇಳಿರುವುದೆಲ್ಲವನ್ನು ಚಾಚುತಪ್ಪದೆ ನಾನು ಜಾರಿಗೆ ತರುತ್ತೇನೆ. ನಾನು ಹೇಳುವವರೆಗು ಕುಳಿತುಕೊಳ್ಳಿ, ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲದಿದ್ದರೆ ಹೇಳಿ ನಾನು ಹೋಗುತ್ತೇನೆ. If you don't want hear me… ತಾವು ಏನು ಬೇಕಾದರು ಚರ್ಚೆ ಮಾಡಿ. ದಯಮಾಡಿ ನೀವುಗಳು ಸಲಹೆ ಕೊಡಿ. ನೀವು ಕೊಟ್ಟಂಥ ಸಲಹೆಗಳನ್ನು ನಾನು ತಲೆ ಬಾಗಿ ಅವುಗಳನ್ನು ಅನುಷ್ಠಾನ ಮಾಡಿ ಇದನ್ನು ತಡೆಯುವುದಕ್ಕೆ ನಾನು ಸಿದ್ದನಿದ್ದೇನೆ. ಒಂದು ಸಲಹೆ ನಾನು ಏನು ಕೊಟ್ಟಿದ್ದೇನೆಂದರೆ, ಒಂದು ಸಾರಿ ಈ ಎಕ್ಸ್‌ಪೋರ್ಟ್ ಅನ್ನು ಕೇವಲ ಕರ್ನಾಟಕ ರಾಜ್ಯದಲ್ಲಿ ಅಲ್ಲದೆ ಇಡೀ ದೇಶದಲ್ಲಿನ ಎಕ್ಸ್‌ಪೋರ್ಟ್‌ನ್ನು ನಿಲ್ಲಿಸಿ ನಮ್ಮ ಸಂಪತ್ತನ್ನು ನಮ್ಮ ರಾಜ್ಯದಲ್ಲಿ ಬದುಕಬೇಕಾಗಿಲ್ಲ. ಜಗತ್ತಿನ ಯಾವುದೇ ದೇಶಗಳು ಭಗವಂಥ ಕೊಟ್ಟಂಥ ಕಬ್ಬಿಣ, ಚಿನ್ನದ ಅದಿರಿನ ಸಂಪತ್ತನ್ನು ಈ ರೀತಿಯಾಗಿ ಹಾಳು ಮಾಡಿಕೊಳ್ಳುತ್ತಿಲ್ಲ. ನಾವು ಮಾತ್ರ ಲೂಟಿ ಮಾಡುತ್ತಿದ್ದೇವೆ. ಇದನ್ನು ಕೊನೆ ಮಾಡುವುದಕ್ಕೆ ಪ್ರಧಾನಿಯವರು ಮುಖ್ಯಮಂತ್ರಿಗಳ ಸಭೆ ಕರೆಯಲಿ ಮತ್ತು ಈ ಸಭೆಗೆ ಪ್ರತಿಪಕ್ಷದ ನಾಯಕರುಗಳನ್ನು ಸಹ ಕರೆಯಲಿ. ಇಡೀ ದೇಶದಲ್ಲಿ ನಡೆಯುತ್ತಿರುವ ಈ ದಂಧೆಯನ್ನು ಕೊನೆ ಮಾಡುವುದಕ್ಕೆ ಪ್ರಧಾನಿಯವರು ಏನು ಸಲಹೆ ಮತ್ತು ಏನು ಒಮ್ಮತ್ತಲ್ಲೇ ಅಲ್ಲಿ ಬರುತ್ತದೆಯೋ ಅದನ್ನು ಜಾರಿಗೆ ತರುವಂಥ ಮೊದಲನೇ ರಾಜ್ಯ ನಮ್ಮದಾಗಿರುತ್ತದೆಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಅಧ್ಯಕ್ಷರು: ಉತ್ತರಕ್ಕೆ ಮತ್ತೆ ಉತ್ತರ ಬೇಡ. ತಾವು ಮಾತನಾಡಿ, ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ನೀವು ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಅವರು ಮಾತನಾಡುವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಟಿ.ಬಿ.ಜಯಚಂದ್ರರವರು ಮಾತನಾಡುವುದನ್ನು ದಾಖಲಿಸಿಕೊಳ್ಳಬಾರದೆಂದು ಮಾನ್ಯ ಸಭಾಧ್ಯಕ್ಷರ ಅನುಮತಿ ಮೇರೆಗೆ ದಾಖಲಿಸಿಕೊಂಡಿರುವುದಿಲ್ಲ)

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿ ಮುಗಿಸಲಿ ಆನಂತರ ತಾವು ಮಾತನಾಡಿ. ಈ ರೀತಿಯಾಗಿ ನಡೆಯುವುದಾದರೆ ರೂಲ್ಸ್ ಏತಕ್ಕೆ ಇರಬೇಕು. ನೀವು ಹೇಳಿದ ಹಾಗೆ ನಡೆಸುವುದಕ್ಕೆ ಆಗುವುದಿಲ್ಲ. ಚರ್ಚೆಗೆ ಚರ್ಚೆ ಆಗುವುದಕ್ಕೆ. .. there are procedures. ಪ್ರೊಸಿಜರ್ ಬಿಟ್ಟು ನಡೆಸುವುದಕ್ಕೆ ಆಗುವುದಿಲ್ಲ. ಅವರು ಏನು ಹೇಳಿದ್ದಾರೆ ಅದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಾರೆ. ಅದಕ್ಕೆ ನೀವು ಹೇಳಬೇಕೆಂದು ಏನು ಇಲ್ಲ. ನೀವು ಮಾತನಾಡಿದಂಥ ಸಂದರ್ಭದಲ್ಲಿ ಹೇಳಿ. ನೀವು ಮಾತನಾಡುವುದಕ್ಕೆ ನಾನು ಅನುಮತಿ ಕೊಟ್ಟಿಲ್ಲ. ಅವರು ಮಾತನಾಡಬಾರದೆಂದು ಹೇಳುವುದಿಲ್ಲ. ಆದರೆ, ಅವರು ಮತ್ತು ಇವರು ಮಾತನಾಡುತ್ತಾ ಹೋದರೆ where is the end for it? ಈಗ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದಕ್ಕೆ ಅವರು ಉತ್ತರ ಕೊಡುತ್ತಾರೆ. ಅವರಿಗೆ ಉತ್ತರ ಕೊಡುವುದಕ್ಕೆ ಶಕ್ತಿ ಇಲ್ಲವೆಂದು ತಾವು ಹೇಳುತ್ತೀರಾ? ನೀವು ಮಾತನಾಡುವುದಕ್ಕೆ ಅವರು ಒಪ್ಪಿಲ್ಲ, ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕರೆದಿದ್ದೇನೆ. ನೀವು ಮಾತನಾಡುವ ದಾಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರನ್ನು ಒಲಿಸುವುದಕ್ಕೆ ಮಾತನಾಡುತ್ತೇನೆಂದು ತಾವು ಮಾತನಾಡಿದ್ದೀರಿ. ಇದು ಗೌರವ ತರುವಂಥದ್ದೆ? ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದ ಮೇಲೆ ಅದಕ್ಕೆ ಏನು ಉತ್ತರ ಕೊಡಬೇಕಾಗಿದೆಯೋ ಅದನ್ನು ವಿರೋಧಪಕ್ಷದ ನಾಯಕರು ಕೊಡುತ್ತಾರೆ. ನಿಮ್ಮ ಮಾತನ್ನು ಕೇಳುವುದಕ್ಕೆ ನಾನು ನಿಮಗೆ ಅನುಮತಿ ಕೊಟ್ಟಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಯೀಲ್ಡ್ ಆಗಬೇಕು. ಅವರು ಮಾತನಾಡುವುದಕ್ಕೆ ನಾನು ಕರೆದಿದ್ದೇನೆ. ಅವರು ಯೀಲ್ಡ್ ಆಗಿಲ್ಲ. ನಿಮ್ಮನ್ನು ನಾನು ಕರೆದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಧ್ಯದಲ್ಲಿ ಮಾತನಾಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಒಂದು ನಿಮಿಷ ಮಾತನಾಡಿ ಮುಗಿಸುತ್ತಾರೆ. ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು, ಮಾತನಾಡಿ

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. 2004ನೇ ಸಾಲಿನಿಂದ ಇಲ್ಲಿಯವರೆಗೆ

ನಿರಂತರವಾಗಿ ಕಬ್ಬಿಣ ಅದಿರು ಈ ರಾಜ್ಯದಿಂದ ಹೊರಗಡೆ ಹೋಗುತ್ತಿದೆ. ಮಾನ್ಯ ಸಿದ್ದರಾಮಯ್ಯನವರು ಮತ್ತು ಧರ್ಮಸಿಂಗ್‌ನವರು ಇದ್ದ ಕಾಲದಿಂದಲೂ ಹೋಗುತ್ತಿದೆ ಎನ್ನುವ ಮಾತನ್ನು ಹೇಳಿದರು ಕಬ್ಬಿಣ ಅದಿರಿನ ಮಾಫಿಯಾ ಅವತ್ತಿನಿಂದ ಇವತ್ತಿನವರೆಗೂ ನಡೆಯುತ್ತಿದೆ. ಆದರೆ ಇವತ್ತು ಈ ರೀತಿಯಾಗಿ ಇರತಕ್ಕಂಥದ್ದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಚರಂತಿಮಠರವರೆ ನೀವು ಕುಳಿತುಕೊಳ್ಳಿ.

ಶ್ರೀ ಟಿ ಬಿ ಜಯಚಂದ್ರ: ನಮಗೆ ಕುಳಿತುಕೊಳ್ಳಲು ಹೇಳುತ್ತೀರಲ್ಲಾ ಅವರಿಗೆ ಹೇಳಿ.

ಅಧ್ಯಕ್ಷರು: ಕುಳಿತುಕೊಳ್ಳಿ.

ಶ್ರೀ ವೀರಣ್ಣ ಚರಂತಿಮಠ: ಮಾನ್ಯ ಅಧ್ಯಕ್ಷರೆ, ಅವರು ಸದನಕ್ಕೆ ತಪ್ಪು ಮಹಿತಿಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು: ಯಾವಾಗ ಬೇಕು ಅವಾಗ ಎದ್ದು ನಿಂತು ಏನು ಬೇಕಾದರೂ ಹೇಳಬಹುದು ಎಂದು ಅಲ್ಲ. ಪ್ಲೀಸ್ ಕುಳಿತುಕೊಳ್ಳಿ.

ಶ್ರೀ ಟಿ ಬಿ ಜಯಚಂದ್ರ: 2004ನೇ ಸಾಲಿನಿಂದ ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳೆ, ನಾನು ಮಾತನಾಡುವಾಗ ಹೇಳುತ್ತೇನೆ, ನನ್ನ ಹತ್ತಿರವು ಅಂಕಿ ಅಂಶಗಳು ಇದೆ. ಇಲ್ಲಿಯವರೆಗೂ ಸುಮಾರು ಐದೂವರೆ ಕೋಟಿಗಳಷ್ಟು ಅದಿರು ಹೊರಗಡೆ ಹೋಗಿದೆ. ಆದರೆ ಇದು ಬೆಳಕಿಗೆ ಬಂದಿದ್ದು ಯಾವಾಗ ಎಂದರೆ, 2004ನೇ ಸಾಲಿನಿಂದ ನಿರಂತರವಾಗಿ ನಡೆದಿರುವಂಥದ್ದು. 2005–2006, 2006–07 ಇರಬಹುದು. ಸರ್ಕಾರದ ವ್ಯಾಪ್ತಿಯಲ್ಲಿರತಕ್ಕಂಥ ಒಬ್ಬ ಲೋಕಾಯುಕ್ತರು ನಿರ್ಧಿಷ್ಟವಾದ ಒಂದು ವರದಿಯನ್ನು ಕೊಟ್ಟರು. ಈ ದಂಧೆಯನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ವರದಿಯನ್ನು ಕೊಟ್ಟಾಗ ಅದನ್ನು ನೀವು ಮಾಡಲಿಲ್ಲವೆನ್ನುವ ಕಾರಣಕ್ಕೆ ಲೋಕಾಯುಕ್ತರು ರಾಜೀನಾಮೆ ಕೊಟ್ಟಿರಬೇಕಾದಾಗ ಈ ಪ್ರಸಂಗ ಉದ್ಭವಿಸಿದೆ. ಮಾನ್ಯ ಸಿದ್ದರಾಮಯ್ಯ ಅಥವಾ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಆಯಿತು ಎನ್ನತಕ್ಕಂಥ ಪ್ರಶ್ನೆ ಅಲ್ಲ. ಇವತ್ತು ಅದನ್ನು ಸೇರಿಸಿದಂತೆ ನಾನು ಹೇಳುತ್ತೇನೆ. ನಿಮ್ಮ ಹತ್ತಿರ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ, ಅಧಿಕೃತವಾದಂಥ ಮಾಹಿತಿ ನನ್ನ ಹತ್ತಿರ ಇದೆ. ಐದೂವರೆ ಕೋಟಿ ಟನ್‌ಗಳಷ್ಟು

ಅದಿರಿನ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ, ಇದುವರೆಗೆ ಅದು ಅಕ್ರಮವಾಗಿ ಹೊರಗಡೆ ಹೋಗಿರುವಂಥದ್ದು. ಅದರ ಸಂಪತ್ತಿನ ಪ್ರಮಾಣ ಎಷ್ಟು ಎಂದರೆ, 50,000-60,000 ಕೋಟಿ ರೂ.ಗಳಷ್ಟು ಇವತ್ತು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ. ನಮಗೆ ರಾಯಲ್ಟಿ ಬರುತ್ತಿಲ್ಲ. ನಮ್ಮ ಸಂಪತ್ತು ಲೂಟಿಯಾಗುತ್ತಿದೆ. ನಮ್ಮ ರಸ್ತೆಗಳು ಹಾಳಾಗುತ್ತಿದೆ ಮತ್ತು ಪರಿಸರಕ್ಕೆ ಹಾನಿಯಾಗುತ್ತಿದೆ. ಇಷ್ಟೆಲ್ಲಾ ಇರುವಂಥ ಸಂದರ್ಭದಲ್ಲಿ, ಸಿದ್ದರಾಮಯ್ಯನವರ ಕಾಲದಲ್ಲಿ ಆಗಿರುವಂಥದ್ದು ಆದರೆ, ಅದನ್ನು ನಾವು ಸಮರ್ಥನೆ ಮಾಡುತ್ತಿಲ್ಲ, ಅದನ್ನು ತಪ್ಪಿಸುವುದಕ್ಕೋಸ್ಕರವೇ ಲೋಕಾಯುಕ್ತರು ಕೊಟ್ಟಿರುವ ವರದಿಯನ್ನು ಏನು ಮಾಡಿದಿರಿ ಎನ್ನತಕ್ಕಂಥದ್ದನ್ನು ಕೇಳುವುದಕ್ಕೆ ನಾವು ನಿಂತಿರುತ್ತೇವೆ.

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸಿದ್ಧರಾಮಯ್ಯನವರೆ ನೀವು ಸೋಮವಾರವು ಮಾತನಾಡಿ, ಒಂದು ನಿಮಿಷ, ಮಾನ್ಯ ಜಯಚಂದ್ರರವರಿಗೆ ಒಂದು ಮಾತನ್ನು ಹೇಳಬಾರದೇ? ನೀವು ಹೀಗೆ ಮಾಡಿದರೆ ಹೇಗೆ? ಮಾನ್ಯ ಜಯಚಂದ್ರರವರು ನನ್ನ ಹತ್ತಿರ ಮಾಹಿತಿ ಇದೆ, ಐದೂವರೆ ಕೋಟಿ ಟನ್‌ನಷ್ಟು ಅದಿರು ಹೊರಗಡೆ ಹೋಗಿದೆ, ಅವರದ್ದು 50,000-60,000 ರೂ.ಗಳಷ್ಟು ಆಗುತ್ತದೆಂದು ಹೇಳಿದರು. ಅದನ್ನು ನಾನು ಅಲ್ಲಗೆಳೆಯುವುದಿಲ್ಲ. ಇದನ್ನು ಬೆಳಕಿಗೆ ತಂದಿರುವಂಥ ಲೋಕಾಯುಕ್ತರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.. ಬೆಳಗಾಂ ಅಧಿವೇಶನದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಕೇವಲ ಕುಮಾರಸ್ವಾಮಿಯವರ ಪಿರಿಯಡ್ ಬೇಡ ಸ್ವಾಮಿ ನಮ್ಮ ಕಾಲದ ತನಿಖೆಯನ್ನು ಮುಂದುವರೆಸಬೇಕೆಂದು ನಾನು ಹೇಳಿರುವವನು. ಒಂದು ವಿಷಯವನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಕಬ್ಬಿಣ ಅದಿರು ರಫ್ತನ್ನು ಸಂಪೂರ್ಣ ನಿಷೇದಿಸಿ ನಮ್ಮ ದೇಶದ ಉಕ್ಕು ಕೈಗಾರಿಕೆಗಳಿಗೆ ಮಾತ್ರ ಸರಬರಾಜು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ದೇಶದಲ್ಲಿರುವ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕೆಂದು ನಾಳೆಯೆ ನಾನು ಪ್ರದಾನಿಯವರಿಗೆ ಪತ್ರವನ್ನು ಬರೆಯುತ್ತೇನೆ. ಒಂದು ನಿಯೋಗ ಹೋಗೋಣ. ಕರ್ನಾಟಕದಿಂದಲಾದರೂ ಇನ್ನು ಮುಂದೆಯಾದರೂ ಈ ದಂಥೆಯನ್ನು ತಪ್ಪಿಸಲು. ಎಕ್ಸ್‌ಪೋರ್ಟ್‌ನ್ನು ನಿಲ್ಲಿಸೋಣ. Value added ಇನ್ನು ಮುಂದೆ ನಮ್ಮ ದೇಶದಲ್ಲಿರುವ ಕೈಗಾರಿಕೆಗಳಿಗೆ ಸಿಗುವಂಥ ಒಂದು ವ್ಯವಸ್ಥೆಯನ್ನು ಮಾಡೋಣ.

ಅದಕ್ಕೆ ನೀವು ನಿಮ್ಮ ಸಂಪೂರ್ಣ ಸಹಕಾರವನ್ನು ಕೊಟ್ಟರೆ ಒಂದು ನಿಯೋಗ ಹೋಗೋಣ. ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡೋಣ. ಇದಕ್ಕೆ ನೀವು ಯಾರು ಕೋ-ಆಪರೇಷನ್ ಕೊಡುವುದಕ್ಕೆ ರೆಡಿ ಇಲ್ಲವಲ್ಲಾ? ಏನು ನಿಮ್ಮ ಒಪ್ಪಿಗೆ ಇದೆ ತಾನೆ? ನಾಳೆಯೆ ನಿಯೋಗ ಹೋಗೋಣ, I am ready, Please co-operate with us. (ಗೊಂದಲ) ಇಲ್ಲಿಯವರೆಗೆ ಆಗಿರುವ ಬಗ್ಗೆ ತನಿಖೆ ಆಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಇನ್ನು ಮುಂದೆ ಈ ದಂಧೆ ಮುಂದುವರೆಯಕೂಡದು. ನಮ್ಮ ಸರ್ಕಾರದಿಂದ ಏನು ಮಾಡಬೇಕು ಹೇಳಿ, ಅದಕ್ಕೆ ನಾನು ರೆಡಿ ಇದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇದು ಹೇಗಾಯಿತು ಎಂದರೆ, ಮಾನ್ಯ ಯಡಿಯೂರಪ್ಪನವರಿಗೆ ಈಗಲಾದರೂ ಕೂಡ ಧೈರ್ಯ ಬಂದಿದೆ. ಧೈರ್ಯದಿಂದ ಮಾತನಾಡುವ ಮನಸ್ಸು ಬಂದಿದೆ ಎನ್ನುವುದು. ನಾನು ಮಂತ್ರಿಯಾಗಿರುವುದು 2004-05 ಆಗ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು ನಾನು ಒಂದೂವರೆ ವರ್ಷಗಳ ಕಾಲ ಇದ್ದೆ. ನನ್ನ ಹತ್ತಿರ Mines and Geology Department ಇರಲಿಲ್ಲ, ನನ್ನ ಹತ್ತಿರ Forest Department ಇರಲಿಲ್ಲ. ನನಗೆ Finance Department ಮಾತ್ರ ಇತ್ತು. ನೀವು ವಿರೋಧ ಪಕ್ಷದಲ್ಲಿ ಇದ್ದಾಗ ಏನು ಮಾಡಿದಿರಿ. ಮಾನ್ಯ ಯಡಿಯೂರಪ್ಪನವರೆ 2004-05ರಲ್ಲಿ ನೀವು ಇಲ್ಲಿ ಕುಳಿತಿದ್ದೀರಲ್ಲಾ, did you raise this issue? No.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಅಧಿಕಾರದಲ್ಲಿ ಇದ್ದಾಗ ಮಾಡುವುದು ಬಿಟ್ಟು ವಿರೋಧ ಪಕ್ಷದವರನ್ನು ಕೇಳುತ್ತೀರಲ್ಲಾ? (ಗೊಂದಲ) ವಾದಕ್ಕೋಸ್ಕರ ವಾದ ಅಲ್ಲ, ಅದಕ್ಕೆ ಉತ್ತರಬೇಕು.

ಶ್ರೀ ಬಿ ಎಸ್ ಯಡಿಯೂರಪ್ಪ: ನಾನು ಒಂದು ವಿಶೇಷವಾದ ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ ಹೋಗುತ್ತೇನೆ. ಆದ್ದರಿಂದ ತಮ್ಮ ಚರ್ಚೆಯನ್ನು ತಾವು ಸೋಮವಾರ ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳೇ 5 ನಿಮಿಷ ಕುಳಿತುಕೊಳ್ಳಿ.

ಅಧ್ಯಕ್ಷರು: ಬೇಗ ಮುಗಿಸುತ್ತೀರಾ? ಸೋಮವಾರ ಚರ್ಚೆ ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಜನಾರ್ಧನ ರೆಡ್ಡಿಯವರು ಇಲ್ಲಿ ಕುಳಿತಿದ್ದಾರೆ. ನೀವು ಆಗ ಮಂತ್ರಿಯಾಗಿರಲಿಲ್ಲ. ಕುಮಾರಸ್ವಾಮಿಯವರು Chief Minister ಆಗಿದ್ದರು. ನೀವು ತಾನೇ 150 ಕೋಟಿ ರೂ.ಗಳ ಬಗ್ಗೆ ಆರೋಪ ಎತ್ತಿರುವುದು.

ಶ್ರೀ ಜಿ ಜನಾರ್ಧನರೆಡ್ಡಿ: ಹೌದು

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅದನ್ನು ಯಾವಾಗ ಎತ್ತಿತ್ತು ಎಂದರೆ, 2006–07ನೇ ಸಾಲಿನಲ್ಲಿ, ಆಗ ಯಾರು ಹಣಕಾಸಿನ ಮಂತ್ರಿಗಳಾಗಿದ್ದರು. Mr. Yadiyurappa Deputy Chief Minister ಆಗಿದ್ದರು. ಜನಾರ್ಧನ ರೆಡ್ಡಿಯವರು 150 ಕೋಟಿ ರೂ.ಗಳ ಆರೋಪ ಎತ್ತಿದ ಮೇಲೆ ಲೋಕಾಯುಕ್ತರಿಗೆ ರೆಫರ್ ಮಾಡಿದಿರಿ ಅಲ್ಲವೇ? ತನಿಖೆಗೆ ರೆಫರ್ ಮಾಡಿದ್ದು ಯಾವತ್ತಿನಿಂದ ಯಾವತ್ತಿನವರೆಗೆ ಎಂದರೆ ದಿನಾಂಕ: 01–01–2000 ದಿಂದ ದಿನಾಂಕ 09.09.2008ರವರೆಗೆ ತನಿಖೆ ಮಾಡುವುದರ ಜೊತೆಗೆ 150 ಕೋಟಿ ರೂ.ಗಳದ್ದು ತನಿಖೆ ಮಾಡಿ ಎಂದು ಭಟ್ ಆಯೋಗಕ್ಕೆ ಕೊಟ್ಟಿದ್ದರು. ಲೋಕಾಯುಕ್ತರು ಎಂದು ಕೊಟ್ಟರು. When did this report, ನಿಮ್ಮ ಸರ್ಕಾರದ ಕೈ ಸೇರಿದ್ದು ಯಾವಾಗ ಎಂದರೆ ಡಿಸೆಂಬರ್ 2008ರಲ್ಲಿ, ಅದು ಬಂದ ನಿಮಗೆ ಎಷ್ಟು ದಿವಸಗಳಾಯಿತು. ಒಂದೂವರೆ ವರ್ಷವಾಯಿತು, ನೀವು ಈ ರಿಪೋರ್ಟ್ ಓದಿರುತ್ತೀರಿ ತಾನೆ? ನಿಮ್ಮ ಗಮನಕ್ಕೆ ಅಕ್ರಮ ಗಣಿಗಾರಿಕೆ ಆಗಿದ್ದು ಬಂತು ತಾನೇ? ಲೋಕಾಯುಕ್ತರು ಕ್ರಮ ತೆಗೆದುಕೊಳ್ಳಿ ಎಂದು ಬರೆದವರು ತಾನೆ? As Chief Minister since 1 year 6 months, why you are keeping quiet? Even after submission of this report you made a statement in Bellary that ಅಕ್ರಮ ಗಣಿಗಾರಿಕೆ ನಡೆಯುತ್ತಿಲ್ಲ ಎಂದು. ಏನ್ರಿ ಯಡಿಯೂರಪ್ಪನವರೆ, ಈ ರಾಜ್ಯಕ್ಕೆ ಅನ್ಯಾಯ ಮಾಡಿರುವವರು ಯಾರು ಸರ್ಕಾರದಿಂದ ಹೇಳುತ್ತೀರಿ ಅದಿರು ಲೂಟಿ ನಡೆಯುತ್ತಿರುವುದಕ್ಕೆ ಸಾಧ್ಯವೇ ಇಲ್ಲ. ನೀವು ನಿಮ್ಮ ಜಿಲ್ಲೆಯಲ್ಲಿ ಹೇಳಿರುವುದು. ಡಿಸೆಂಬರ್ 2008ರಲ್ಲಿ ಲೋಕಾಯುಕ್ತರು ನಿಮಗೆ ರಿಪೋರ್ಟ್ ಕೊಟ್ಟು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ, ಫಾರೆಸ್ಟ್ ಜಮೀನನ್ನು ಅಕ್ರಮಿಸಿಕೊಂಡು ಬಿಟ್ಟಿದ್ದಾರೆ. Revenue land ನ್ನು ಅಕ್ರಮಿಸಿಕೊಂಡು ಬಿಟ್ಟಿದ್ದಾರೆ, ಎಷ್ಟು ಮಾಡಿದ್ದೀರಿ 1000

ಹೆಕ್ಟೇರ್ ಪ್ರದೇಶವನ್ನು ಅಕ್ರಮಿಸಿಕೊಂಡಿದ್ದಾರೆ. ಅಲ್ಲಿ ಮಾಡಿದ್ದಾರಲ್ಲಾ ಸ್ವಾಮಿ ಅದನ್ನೆ ಈಗ 50,000–60,000 ಕೋಟಿ ರೂ.ಗಳಷ್ಟು ಕದ್ದು ಹೋಗಿರುವಂಥದ್ದು. You are a party to it. Your government is a party to it. You should own the responsibility.

ಶ್ರೀ ಬಸವರಾಜಬೊಮ್ಮಾಯಿ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ರಿಪೋರ್ಟಿನ ಮೇಲೆ ನಾವು action ತೆಗೆದುಕೊಂಡಿದ್ದೇವೆ. ನಮ್ಮ ಹತ್ತಿರ ATR report ಇದೆ. ಇದೇ ಸದನದಲ್ಲಿ ಮಂಡಿಸುತ್ತೇವೆ. We have taken action. ಲೋಕಾಯುಕ್ತ ರಿಪೋರ್ಟಿನ ಮೇಲೆ actionನ್ನು ತೆಗೆದುಕೊಂಡಿದ್ದೇವೆ. ಲೋಕಾಯುಕ್ತರ ATR ಇದೆ.

ಶ್ರೀ ಸಿದ್ದರಾಮಯ್ಯ: ಅದರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಬಸವರಾಜ ಬೊಮ್ಮಾಯಿ: ಲೋಕಾಯುಕ್ತ ಶಿಫಾರಸ್ಸು ಏನೇನು ಇದೆ ಅವೆಲ್ಲವನ್ನು ಕೂಡ ಇವತ್ತು ನಾವು actionನ್ನು ತೆಗೆದುಕೊಂಡಿದ್ದೇವೆ. ಅದರ ಮೇಲೆ ATR ಇದೆ.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, 1.1.2000ದಿಂದ ಇವತ್ತಿನವರೆಗೆ ಯಾರ್ಯ್ಯಾರು ಈ ಅಕ್ರಮ ಗಣಿಗಾರಿಕೆಯಲ್ಲಿ ನುಂಗಿದ್ದಾರೆ, ತಿಂದಿದ್ದಾರೆ, ಅವರೆಲ್ಲರೂ ಜೈಲಿಗೆ ಹೋಗಬೇಕು. ಎಲ್ಲರೂ ಜೈಲಿಗೆ ಹೋಗಬೇಕು. ಅವರೆಲ್ಲರೂ ಜೈಲಿಗೆ ಹೋಗಬೇಕಾದರೆ ಮಾನ್ಯ ಮುಖ್ಯಮಂತ್ರಿಯವರಿಗೆ ಧಮ್ ಇದ್ದರೆ ಸಿ.ಬಿ.ಐ.ಗೆ ವಹಿಸಲಿ, ಅವರು ಸಹ ಇದನ್ನು ಸಿಬಿಐಗೆ ಕೊಡಬೇಕೆಂದು ಹೇಳಿದರು. ನೀವು ಸಿಬಿಐ ತನಿಖೆಗೆ ಕೊಡಬೇಕೆಂದು ಹೇಳಿದ್ದೀರಿ, ಅಲ್ಲವೇ?

ಶ್ರೀ ಜಿ ಜನಾರ್ಧನರೆಡ್ಡಿ(ಮಾನ್ಯ ಪ್ರವಾಸೋದ್ಯಮ ಸಚಿವರು): ಮಾನ್ಯ ಸಿದ್ದರಾಮಯ್ಯನವರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ನಾನು ಶಾಂತವಾಗಿ ಮಾತನಾಡುತ್ತೇನೆ, ನನಗೆ ಏನು emotional ಇಲ್ಲ. ನಾನು ಬಹಳ ಪ್ರಶಾಂತವಾಗಿ ಮಾತನಾಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸಿದ್ದರಾಮಯ್ಯನವರು ಮಾಜಿ

ಮುಖ್ಯಮಂತ್ರಿಯವರಾದ ಹೆಚ್.ಡಿ.ಕುಮಾರ ಸ್ವಾಮಿಯವರ period ನಿಂದ ಒಂದು ಮಾತನ್ನು ಹೇಳಿದರು. ಇವತ್ತು ನನಗೆ ಬಹಳ ಸಂತೋಷವಾಗಿದೆ. 150 ಕೋಟಿ ರೂಪಾಯಿ ಭ್ರಷ್ಟಾಚಾರದ ಸದ್ಯದ ಒಂದು ಆರೋಪವನ್ನು ನಾನು ಏನು ಮಾಡಿದ್ದೇನೆ. ವಿಷಯದಲ್ಲಿ ನಾನು ಇವತ್ತಿನವರೆಗೂ ಕೂಡ ಹೋರಾಟವನ್ನು ಮಾಡುತ್ತಿದ್ದೇನೆ. ಅವತ್ತು ನಾನು 150 ಕೋಟಿ ರೂಪಾಯಿಯಗಳ ಭ್ರಷ್ಟಚಾರದ ಬಗ್ಗೆ ಆರೋಪವನ್ನು ಮಾಡಿದಂತಹ ಸಂದರ್ಭದಲ್ಲಿ U.L.Bhatರವರ Commissionಗೆ ಕೊಟ್ಟಿದ್ದರು. ಆಗ ಯು.ಎಲ್.ಭಟ್‌ರವರು ಹೇಳಿದರು. ಇದು ಬಹಳ ಗಂಭೀರವಾದ ಆರೋಪವಾಗಿರುವುದರಿಂದ ಇದನ್ನು ಸಿ.ಬಿ.ಐ. ಅಧಿಕಾರಿಗಳ ಸಹಕಾರವಿಲ್ಲದೆಯೇ ಇದನ್ನು ಬಗೆಹರಿಸುವುದಕ್ಕೆ ಕಷ್ಟವಾಗುತ್ತದೆ ಎಂದು ಆಗ ಅವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದರು. ಈ ಬಗ್ಗೆ ತಕ್ಷಣ ಅವತ್ತಿನ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಶ್ರೀ ಯು.ಎಲ್ ಭಟ್‌ರವರನ್ನು ಮನೆಗೆ ಹೋಗುವ ಹಾಗೆ ವಾಪಸ್ಸು ಮಾಡಿದರು. ಅದು ಆದ ಮೇಲೆ ಲೋಕಾಯುಕ್ತರಿಗೆ ಇದನ್ನು ವಹಿಸಿದ್ದೇನೆ ಎಂದು ಮಾಧ್ಯಮಗಳಲ್ಲಿ ಹೇಳಿದರು. ಆದರೆ ಅವರು 150 ಕೋಟಿ ರೂಪಾಯಿಗಳ ಭ್ರಷ್ಟಾಚಾರದ ವಿಷಯದಲ್ಲಿ ಮಾತ್ರ ಲೋಕಾಯುಕ್ತರಿಗೆ ವಹಿಸಲಿಲ್ಲ. ಇವತ್ತು ಇಡೀ ಜಗತ್ತಿಗೆ ತಿಳಿಯಬೇಕಾಗಿರುವಂತಹ ವಿಷಯ, ಅದು ಆದ ನಂತರ ಇನ್ನೊಂದು ವಿಷಯ ಮಾನ್ಯ ಪ್ರತಿ ಪಕ್ಷದ ನಾಯಕರು ಏನು ಪ್ರತಿಪಾದನೆಯನ್ನು ಮಾಡಿದಾರೆ. 2008ರಂದು ಸನ್ಮಾನ್ಯ ಲೋಕಾಯುಕ್ತರು ಸರ್ಕಾರಕ್ಕೆ ಬಳ್ಳಾರಿ ಜಿಲ್ಲೆ ಸಮೇತ ಚಿತ್ರದುರ್ಗ, ತುಮಕೂರು ಆಗಿರಬಹುದು ಎಲ್ಲಾ ಕಡೆಗೆ ಗಣಿಗಳಲ್ಲಿ ಅಕ್ರಮ ಆಗಿದೆ, ಹೆಚ್ಚು ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದು ಅಕ್ರಮ ಗಣಿಗಾರಿಕೆ ಮಾಡುತ್ತಿದ್ದಾರೆಂದು ಹೇಳಿ ಅವರು ರಿಪೋರ್ಟ್ ಕೊಟ್ಟಿರುವುದು ಸತ್ಯ. ಆ ರಿಪೋರ್ಟ್ ಸರ್ಕಾರದ ಕೈಯಲ್ಲಿ ಸೇರಿರುವುದು ಸತ್ಯ. At the same time Lokayuktha ದವರು ಏನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ವರದಿಯನ್ನು ಕೊಟ್ಟಿದ್ದರು, ಅದು ಆದ ತಕ್ಷಣ ನಾನು ತಮ್ಮಲ್ಲಿ ಹೇಳುತ್ತಿದ್ದೇನೆ. ಹೆಚ್ಚುಕಡಿಮೆ ಎಂದರೆ ನಮ್ಮ Parliament election ನಡೆಯುವುದಕ್ಕೆ 2 ತಿಂಗಳ ಮುಂಚೆ ಸರ್ಕಾರ ಬಂದ ನಂತರ 8–10 ತಿಂಗಳಿಗೆ ಸರ್ಕಾರಕ್ಕೆ ವರದಿ ಬಂದ ತಕ್ಷಣ

forest ಅಧಿಕಾರಿಗಳು ತಕ್ಷಣ ಅದರ ಮೇಲೆ action ತೆಗೆದುಕೊಳ್ಳಬೇಕೆಂದು ಬಳ್ಳಾರಿ ಅಧಿಕಾರಿಗಳಿಗೆ immediate ಆಗಿ reportನ್ನು ಕಳುಸಹಿಸಿದರು. 58 ಗಣಿ ಮಾಲೀಕರು ಒತ್ತುವರಿ ಮಾಡಿಕೊಂಡಿದ್ದರು. ನಾನು ಕೊನೆಯದಾಗಿ ಹೇಳಿ ಮುಗಿಸಿಬಿಡುತ್ತೇನೆ. ಅವರು ಹೇಳಿದ ತಕ್ಷಣ ನಾವು ಏನು ಮಾಡಿದ್ದೇವೆಂದರೆ, 5 to 20 hectares ಹೆಚ್ಚು ಏನು ಒತ್ತುವರಿ ಮಾಡಿಕೊಂಡಿದ್ದಾರೆ. ಎಲ್ಲಾ ಗಣಿಗಳ ಮೇಲೆ FIR ಮಾಡಿದ್ದೇವೆ. ಅವರುಗಳ ಮೇಲೆ ಕೇಸ್ ಮಾಡಿದ್ದೇವೆ. Minesನ್ನು ಬಂದ್ ಮಾಡಬೇಕೆಂದು ಸರ್ಕಾರದ ಕಡೆಯಿಂದ ನೋಟೀಸ್‌ನ್ನು ಕೊಟ್ಟರು. ಎಲ್ಲಾ ಗಣಿಗಳನ್ನು ಬಂದ್ ಮಾಡಿದ್ದರು. ಗಣಿಗಳನ್ನು ಬಂದ್ ಮಾಡಿದ ಮೇಲೆ ಎಲ್ಲಾ ಗಣಿ ಮಾಲೀಕರುಗಳು ಹೈಕೋರ್ಟ್‌ಗೆ ಹೋಗಿದ್ದಾರೆ. ಹೈಕೋರ್ಟು ಅವರಿಗೆ orderನ್ನು pass ಮಾಡಿದೆ. Disputed Area ಏನು encroached area ಎಂದು ಇವತ್ತು ಸರ್ಕಾರವು ಹೇಳುತ್ತಿದೆ. ಆ encroached areaನ್ನು ಬಿಟ್ಟು ಉಳಿದಿರುವ areaಗಳಲ್ಲಿ mining ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟು ಮೇಲೆಯೇ ಇವತ್ತು ಸರ್ಕಾರವು ಗಣಿಗಾರಿಕೆಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದೆ. ಇದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಸರ್ಕಾರವು ಗೌರವವನ್ನು ಕೊಟ್ಟಿದೆ ಎಂದು ನಾನು ಹೇಳುತ್ತಿರುವ ಒಂದು ಮಾತಾಗಿದೆ. ಲೋಕಾಯುಕ್ತರ ವರದಿಗೆ ಸಂಪೂರ್ಣವಾದಂಥಹ ಗೌರವವನ್ನು ಸರ್ಕಾರವು ಕೊಟ್ಟು ಇದನ್ನು interference ಆಗಿದೆ.

ಶ್ರೀ ಸಿದ್ದರಾಮಯ್ಯ: ಉತ್ತರ ಕೊಡುವಾಗ ಇನ್ನು ಹೆಚ್ಚಾಗಿ ಹೇಳಿ. ಮಾನ್ಯ ಅಧ್ಯಕ್ಷರೆ, 5 ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲದೆ ಇರುವುದರಿಂದ ಈ ಪಾಯಿಂಟ್ ಕಂಪ್ಲೀಟಾಗಬೇಕು. 2008 ಡಿಸೆಂಬರ್‌ನಲ್ಲಿ ಲೋಕಾಯುಕ್ತರು ವರದಿಯನ್ನು ಕೊಟ್ಟರು. ಲೋಕಾಯುಕ್ತ Act ಪ್ರಕಾರ 3 ತಿಂಗಳಲ್ಲಿ ಲೋಕಾಯುಕ್ತರು ವರದಿಯನ್ನು ಕೊಟ್ಟ ಮೇಲೆ ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕಾನೂನಿನಲ್ಲಿ ಹೇಳುತ್ತಾರೆ. ಇವರು ಒಂದು ನಾಮಕಾವಸ್ತೆಗೆ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳಿ ಒಂದು ರಿಪೋರ್ಟ್‌ನ್ನು ಅವರಿಗೆ ಕಳುಹಿಸುವುದು. ಅದು ಯಾವ ತಿಂಗಳಲ್ಲಿ ಅಂದರೆ, not

within 90 days ಅದು ಜುಲೈ ತಿಂಗಳಲ್ಲಿ ಕಳುಹಿಸುತ್ತಾರೆ after seven months. ಈ ಸರ್ಕಾರ seven months ವರೆಗೆ ಏನು ಮುಟ್ಟುವುದಕ್ಕೆ ಹೋಗಿಲ್ಲ. ಈ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲ. ಆ ರಿಪೋರ್ಟಿನ ಮೇಲೆ It is not an action report, it is action be taken report ಎಂದು ಲೋಕಾಯುಕ್ತರು ಹೇಳುತ್ತಾರೆ. ಆಮೇಲೆ ಒಂದೂವರೆ ವರ್ಷ ಯಡಿಯೂರಪ್ಪನವರು ಈಗ Prime Minister ಹತ್ತಿರ ಹೋಗೋಣ ನಡೆಯಿರಿ, ಇದನ್ನು ನಿಲ್ಲಿಸುವ ಬಗ್ಗೆ ಕಡಿವಾಣವನ್ನು ಹಾಕೋಣ ನಡೆಯಿರಿ ಎಂದು ಹೇಳುತ್ತಿದ್ದಾರಲ್ಲಾ, ಒಂದೂವರೆ ವರ್ಷ ಏಕೆ ಅವರು ಬಾಯಿಯನ್ನು ಮುಚ್ಚಿಕೊಂಡಿದ್ದರು ಈ ರಾಜ್ಯದ ಜನರಿಗೆ ಹೇಳುವುದಕ್ಕಾಗುತ್ತದೆಯೇ? ಈಗ ಲೋಕಾಯುಕ್ತರು ಬೇಲಿಕೇರಿ ಬಂದರಿನಲ್ಲಿ ಹಿಡಿದ ಮೇಲೆ ಸ್ವತ: ಅವರೇ ಸಿಕ್ಕಿಹಾಕಿಕೊಂಡ ಮೇಲೆ ಇವತ್ತು ರಾಜೀನಾಮೆಯನ್ನು ಕೊಡುವಂತಹ ಪರಿಸ್ಥಿಯು ನಿರ್ಮಾಣವಾಗಿದೆ. ನನ್ನನ್ನು ಸೇರಿಸಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರನ್ನು ಸೇರಿಸಿ, ಇನ್ಯಾರೇ ಆದರೂ ಕೂಡ, ಯಾರಾದರೂ ಸರಿ ನಾನು ಜೈಲಿಗೆ ಹೋಗುವುದಕ್ಕೆ ತಯಾರಿದ್ದೇನೆ. ನಾನು ತಪ್ಪು ಮಾಡಿದ್ದರೆ ಜೈಲಿಗೆ ಹೋಗುವುದಕ್ಕೆ ತಯಾರಿದ್ದೇನೆ. ಇವರು ಇವತ್ತು ಆ ಧೈರ್ಯವಿದ್ದರೆ, ನನ್ನ ತರಹ ಹೇಳುವುದಕ್ಕೆ ಧೈರ್ಯವಿದ್ದರೆ ನಾಳೇ ಉತ್ತರವನ್ನು ಕೊಡುವಾಗ ನಾನು ಸಿಬಿಐಗೆ ವಹಿಸುತ್ತೇನೆ, ಸತ್ಯ ಹೊರಬರಲಿ, ಯಾರ‍್ಯಾರು ಕಳ್ಳರುಗಳು ಇದ್ದಾರೆ ಅವರೆಲ್ಲರೂ ಜೈಲಿಗೆ ಹೋಗಲಿ, ಶ್ರೀ ಯಡಿಯೂರಪ್ಪನವರು ಇದ್ದರೆ ಯಡಿಯೂರಪ್ಪಾ, ರೆಡ್ಡಿಗಳು ಇದ್ದರೆ ರೆಡ್ಡಿಗಳು, ನಾನು ಇದ್ದರೆ ನಾನು ಓ.ಕೆ. ಇದಕ್ಕೆ ಶ್ರೀ ಯಡಿಯೂರಪ್ಪನವರು ತಯಾರಾಗಬೇಕು. ಅವರು ತಯಾರಾಗಲಿ ಎಂದು ನನ್ನ ಸವಾಲು ಆಗಿದೆ. ಮಾನ್ಯ ಯಡಿಯೂರಪ್ಪನವರೆ, ತಾವು ದಾರಿ ತಪ್ಪಿಸುವುದಕ್ಕೆ ಹೇಳುತ್ತಿದ್ದೀರಾ? ಸೋಮವಾರ ದಿನ ನಾನು ನನ್ನ ಮಾತನ್ನು ಮುಂದುವರಿಸುತ್ತೇನೆ, thank you.

ಅಧ್ಯಕ್ಷರು: ಅಯಿತು. ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುತ್ತೇನೆ. ಶ್ರೀ ಎನ್. ಸಂಪಂಗಿಯವರೆ, ತಾವು ಗಮನವನ್ನು ಸೆಳೆಯುತ್ತೇನೆಂದು ಹೇಳಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ನಿಮಿಷ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿನ್ನೆಯ ದಿನ ತುಮಕೂರು ಜಿಲ್ಲೆಯಲ್ಲಿ ದಲಿತ ಮಹಿಳೆಯನ್ನು ಬಹಳ ಅಮಾನುಷವಾಗಿ ಮಾಡಿದ ಬರ್ಬರ ಕೊಲೆಯ ಬಗ್ಗೆ ಇವತ್ತು Home Minister ರವರು statement ಮಾಡಬೇಕಾಗಿತ್ತು. ನಿನ್ನೆಯ ದಿನ ಈ ಸದನದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಇದ್ದರು. ಇವತ್ತು ಅದರ ಬಗ್ಗೆ ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದರು. ಅದರ ಬಗ್ಗೆ ತಾವು ತಕ್ಷಣ ಹೇಳಿಕೆಯನ್ನು ಮಾಡಿಸಬೇಕು.

ಅಧ್ಯಕ್ಷರು: ಆಯಿತು.

4. ಗಮನ ಸೆಳೆಯುವ ಸೂಚನೆ:

ವಿಷಯ: ಬಾಗೇಪಲ್ಲಿ ಪುರಸಭೆಯಲ್ಲಿ 2007–08 ಮತ್ತು 2008–09ರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡಿರುವ ಬಗ್ಗೆ.

ಶ್ರೀ ಎನ್.ಸಂಪಂಗಿರು(ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಬಾಗೇಪಲ್ಲಿ ಪುರಸಭೆಯಲ್ಲಿ ಹಿಂದಿನ ಮುಖ್ಯಾಧಿಕಾರಿಗಳು 2007–08 ಮತ್ತು 2008–09ರಲ್ಲಿ ಕೋಟ್ಯಾಂತರ ರೂಗಳ ಅವ್ಯವಹಾರ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿಗಳು ತನಿಖೆ ನಡಿಸಿದ್ದರು, ಈವರೆಗೆ ಯಾವುದೇ ಕ್ರಮ ಜರುಗಿಸದಿರುವ ಬಗ್ಗೆ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ(ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ಪುರಸಭೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಹಿಂದೆ ಬಾಗೇಪಲ್ಲಿ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಜಿ. ವೆಂಕಟೇಶ್ ಇವರ ಅವಧಿಯಲ್ಲಿ ಪುರಸಭೆಯ ಲೆಕ್ಕ ಪತ್ರಗಳು ಮತ್ತು ನಗದು ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ ಮತ್ತು ವಿವಿಧ ಯೋಜನನೆಗಳ ಅನುದಾನಗಳನ್ನು ವಿಲೀನ ಮಾಡಿಕೊಂಡಂತೆ ಚೆಕ್ಕುಗಳನ್ನು ಬರೆದಿರುವುದು ಕಂಡು ಬಂದಿದ್ದು, ಸದರಿ ಪುರಸಭೆಯಲ್ಲಿ ವಾರ್ಡು ವ್ಯಾಪ್ತಿಯ ಕಾಮಗಾರಿಗೆ ಕೌನ್ಸಿಲ್ ಅನುಮತಿ ಪಡೆದಿರುವುದಿಲ್ಲ. ಆದರೆ ಅಧ್ಯಕ್ಷರ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರ ಅನುಮೋದನೆ ಪಡೆಯಲಾಗಿದೆ. ತುಂಡು